29 March 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಜೀವನದಲ್ಲಿ ಹಣ, ಆಸ್ತಿ ಎಲ್ಲವೂ ಇದ್ದು, ನೆಮ್ಮದಿ ಇರದಿದ್ದರೆ ಬದುಕಿಗೆ ಅರ್ಥವೇ ಸಿಗುವುದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಬಡವರಿಗೆ ಉಚಿತ ಚಿಕಿತ್ಸೆ ನೀಡಿ: ಸಿಎಂ ಸಿದ್ದರಾಮಯ್ಯ ಪುಟ ಸಂ. 2



ಮೈಸೂರಿನಲ್ಲಿ ಮತ್ತೆ ಧರೆಗುರುಳಿದ ಭಾರಿ ಮರ: ತಪ್ಪಿದ ಅನಾಹುತ ಪುಟ ಸಂ. 4



ಶ್ರೀರಾಮ ಮಹಾರಥೋತ್ಸವ ಯಶಸ್ವಿ, ಸಾವಿರಾರು ಭಕ್ತರು ಭಾಗಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 134 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಉಪ ಚುನಾವಣೆ: ಕೈ ಗೆಲುವು ಖಚಿತ: ಸಿಎಂ

## ಎರಡೂ ಕ್ಷೇತ್ರದಲ್ಲಿ ಪ್ರಚಾರದಲ್ಲಿ ಭಾಗಿ: ಸಿದ್ದರಾಮಯ್ಯ ಹೇಳಿಕೆ

**ಮೈಸೂರು:** ಉಪ ಚುನಾವಣೆಯಲ್ಲಿ ಮಾತ್ರವಲ್ಲ, ಯಾವುದೇ ಚುನಾವಣೆ ಆದರೂ ನಾವೇ ಗೆಲ್ಲುತ್ತೇವೆ. 2028ಕ್ಕೂ ನಮ್ಮದೇ ಗೆಲುವು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎರಡೂ ಕ್ಷೇತ್ರದಲ್ಲೂ ನಾವೇ ಗೆಲ್ಲುತ್ತೇವೆ. ಮಾ.31ರಿಂದ ನಾನು ಕೂಡ ಪ್ರವಾಸ ಹೋಗುತ್ತಿದ್ದೇನೆ. ಬಾಗಲಕೋಟೆ, ದಾವಣಗೆರೆ ಎಲ್ಲಾ ಕಡೆ ಹೋಗುತ್ತೇನೆ. ಈ ಹಿಂದೆ ಬಿಜೆಪಿ ಇದ್ದಾಗಲೂ ನಾವು ಉಪಚುನಾವಣೆ ಗೆದ್ದಿದ್ದೇವೆ. ನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂತು, ಅದು ದಿಕ್ಸೂಚಿನಾ ನೀವೇ ಹೇಳಬೇಕು. ಸದ್ಯದಲ್ಲಿ ಯಾವ ಚುನಾವಣೆಯಾದರೂ ನಾವೇ ಗೆಲ್ಲುತ್ತೇವೆ. ದಾವಣಗೆರೆಯಲ್ಲಿ ಕೂಡ ಯಾವ ಗೊಂದಲ ಇಲ್ಲ. ಎಲ್ಲವೂ ಕೂಡ ಸರಿಯಾಗಿದೆ ಎಂದು ಹೇಳಿದರು.

ದ್ವಿಭಾಷಾ ನೀತಿ ಜಾರಿ ವಿಚಾರ ಕುರಿತು ಪ್ರತಿಕ್ರಯೆ ನೀಡಿದ ಸಿದ್ದರಾಮಯ್ಯ ಅವರು, ಹಿಂದಿ ಭಾಷೆ ಕಡ್ಡಾಯವಿಲ್ಲ. ಅದು ಈ ವರ್ಷದಿಂದಲೇ ಜಾರಿಯಲಿರುತ್ತದೆ ಎಂದು ಸರ್ಕಾರ ತೀರ್ಮಾನ ಮಾಡಿದೆ. ಅದಕ್ಕೆ ವಿರೋಧ–ಪರ ಎಲ್ಲವೂ ಇರುತ್ತದೆ. ಹಿಂದಿ ಕಲಿಯಬಾರದು ಅಂತ ಇಲ್ಲ. ಆದರೆ ಪರೀಕ್ಷೆ ಕಡ್ಡಾಯ ಆಗಬಾರದು ಅಷ್ಟೇ. ಖಾಸಗಿ ಸಂಸ್ಥೆಗಳ ವಿರೋಧ ಇದ್ದರೆ ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಆದರೆ, ಸರ್ಕಾರದ ತೀರ್ಮಾನವನ್ನು ಎಲ್ಲರೂ ಒಪ್ಪಬೇಕೆಂದು ತಿಳಿಸಿದರು. ಸಚಿವ ಎಚ್.ಸಿ.ಮಹದೇವಪ್ಪ, ಶಾಸಕರಾದ ಹರೀಶ್ ಗೌಡ, ಡಿ.ರವಿಶಂಕರ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ ಹಾಜರಿದ್ದರು.



### ನಮ್ಮದು ಹೈಕಮಾಂಡ್ ಪಕ್ಷ

ಸದನದಲ್ಲಿ ಹೈ ಕಮಾಂಡ್ ಅವಕಾಶ ಕೊಟ್ಟರೆ ನಾನೇ ಇನ್ನೆರಡು ಬಜೆಟ್ ಮಂಡನೆ ಮಾಡು ತ್ತೇನೆ ಎಂಬ ಹೇಳಿಕೆ ವಿಚಾರವಾಗಿ ಪ್ರತಿಕ್ರಯಿ ಸಿದ ಅವರು, ನಮ್ಮದು ಹೈಕಮಾಂಡ್ ಪಕ್ಷ. ಹೀಗಾಗಿ ಅವರು ಅನುಮತಿ ಕೊಟ್ಟರೆ ನಾನೇ ಇನ್ನೂ ಎರಡು ಬಜೆಟ್ ಮಂಡನೆ ಮಾಡುತ್ತೇನೆ. ಎಲ್ಲವು ಹೈ ಕಮಾಂಡ್ ಗೆ ಬಿಟ್ಟಿದ್ದು, ಚುನಾವಣೆಗೂ ಸಿಎಂ ಸ್ಥಾನಕ್ಕೂ ಸಂಬಂಧವಿಲ್ಲ ಎಂದು ಹೇಳಿದರು. ವಿಧಾನಸಭೆಯಲ್ಲಿ ಐಪಿಎಲ್ ಟಿಕೆಟ್ ಕೇಳಿದ ವಿಚಾರವಾಗಿ ಪ್ರತಿಕ್ರಯಿಸಿದ ಸಿದ್ದರಾ ಮಯ್ಯ, ಈ ಹಿಂದೆ ಒಂದು ಟಿಕೆಟ್ ಕೊಡು ತ್ತಿದ್ದರು. ಎರಡು ಕೊಡಲು ಶಾಸಕರು ಕೇಳಿದ್ದರು ಎಂದು ಹೇಳಿದರು.

# ನೇಪಾಳಕ್ಕೆ ಕಿರಿಯ ಪ್ರಧಾನಿ

## ಬೆಂಗಳೂರಿನಲ್ಲಿ ಶಿಕ್ಷಣ ಪಡೆದಿದ್ದ ಬಾಲೇಂದ್ರ ಶಾ

**ಕಠ್ಮಂಡು:** ಜೆನ್ ಝಿ ಗಲಭೆಯಿಂದ ಸರ್ಕಾರ ಪತನವಾಗಿದ್ದ ನೇಪಾಳದ 47ನೇ ಪ್ರಧಾನಿಯಾಗಿ ಮಾಜಿ ರ್‍ಯಾಪರ್ ಬಾಲೇಂದ್ರ ಶಾ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. 35ನೇ ವಯಸ್ಸಿಗೆ ಪ್ರಧಾನಿಯಾಗುವ ಮೂಲಕ ನೇಪಾಳದ ಅತ್ಯಂತ ಕಿರಿಯ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬೆಂಗಳೂರಿನ ನಿಟ್ಟೆ ಮೀನಾಕ್ಷಿ ವಿವಿಯಲ್ಲಿ ಬಾಲೇಂದ್ರ ಶಾ ಶಿಕ್ಷಣ ಪಡೆದಿದ್ದರು.



ರಾಷ್ಟ್ರೀಯ ಸ್ವತಂತ್ರ ಪಕ್ಷವು ಬಾಲೇಂದ್ರ ಶಾ ಅವರನ್ನು ತನ್ನ ಸಂಸದೀಯ ಪಕ್ಷದ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತ್ತು. ಪಕ್ಷದ ಅಧ್ಯಕ್ಷ ರಬಿ ಲಮಿಚಾನೆ ಅವರು ಈ ಹುದ್ದೆಗೆ ಶಾ ಹೆಸರನ್ನು ಪ್ರಸ್ತಾಪಿಸಿದಾಗ ಸರ್ವಾನುಮತದ ಅನುಮೋದನೆ ದೊರಕಿತ್ತು.

ನೇಪಾಳದ ಸಾರ್ವತ್ರಿಕ ಚುನಾವಣೆಯಲ್ಲಿ ಆರ್‌ಎಸ್‌ಪಿ ಪಕ್ಷ ಒಟ್ಟು 275 ಸ್ಥಾನಗಳಲ್ಲಿ 182ರಲ್ಲಿ ಭರ್ಜರಿ ಗೆಲುವು ಸಾಧಿಸಿ ಬಹುಮತ ಪಡೆದಿತ್ತು. ನೇಪಾಳದಲ್ಲಿ ಈ ಹಿಂದಿನ ಸರ್ಕಾರಗಳ ಭ್ರಷ್ಟಾಚಾರವನ್ನು ವಿರೋಧಿಸಿ ಜೆನ್ ಝಿ ಹೋರಾಟ ನಡೆಸಿತ್ತು. ಚುನಾವಣೆಯಲ್ಲಿ ನಾಲ್ಕು ಬಾರಿ ಪ್ರಧಾನಿಯಾಗಿದ್ದ ಕೆಪಿ ಶರ್ಮಾ ಒಲಿ ಅವರನ್ನು ಶಾ ಪರಾಜಯಗೊಳಿಸಿ ಗೆಲುವು ಸಾಧಿಸಿದ್ದರು. ನೇಪಾಳ ಚುನಾವಣೆಯಲ್ಲಿ ಆರ್‌ಎಸ್‌ಪಿ ಪ್ರಚಂಡ ಗೆಲುವು ಸಾಧಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿತ್ತು.

ಕಳೆದ ವರ್ಷ ಭ್ರಷ್ಟಾಚಾರದ ವಿರುದ್ಧ ಯುವಕರು ನಡೆಸಿದ ದಂಗೆಯನ್ನು ನಿಯಂತ್ರಿಸಲಾಗದೆ ನೇಪಾಳ ಸರ್ಕಾರ ಪತನಗೊಂಡಿತ್ತು. ಬಳಿಕ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರನ್ನು ಸೋಲಿಸಿರುವ ಬಾಲೇಂದ್ರ ಶಾ ನೇಪಾಳದ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

# ಟವರ್ ಹತ್ತಿ ಕುಡುಕನ ಹುಚ್ಚಾಟ

**ವಿಜಯಪುರ:** ಒಂದು ಬಾಟಲ್ ಕೊಟ್ಟರೆ ಕೆಳಗೆ ಬರ್ತಿನಿ ಎಂದು ಟವರ್ ಹತ್ತಿ ಕುಡುಕ ಹುಚ್ಚಾಟ ಮೆರೆದಿರುವ ಘಟನೆ ತಿಕೋಟ ತಾಲೂಕಿನ ಕೋಟ್ಯಾಳ ಗ್ರಾಮದಲ್ಲಿ ಘಟನೆ ನಡೆದಿದೆ. ಗ್ರಾಮದ ನಿವಾಸಿ ವ್ಯಕ್ತಿ ಮದ್ಯವಸನಿಯಾಗಿದ್ದು, ಎರಡು ವರ್ಷದಲ್ಲಿ ಎರಡನೇ ಬಾರಿ ಟವರ್ ಹತ್ತಿ ಹುಚ್ಚಾಟ ಆಡಿದ್ದಾನೆ. ಆಗಾಗ ಮೊಬೈಲ್ ಟವರ್‌ಗಳನ್ನು ಹತ್ತಿ ಹುಚ್ಚಾಟ ಮೆರೆಯುವುದು ಚಾಳಿ ಆಗಿದೆ. ಮದ್ಯ ಕೊಟ್ಟರೆ ವಾಪಸ್ ಟವರ್‌ನಿಂದ ಇಳೀತಿನಿ ಎಂದು ಪಟ್ಟು ಹಿಡಿದಿದ್ದಾನೆ. ಸ್ಥಳಕ್ಕೆ ತಿಕೋಟಾ ಪೊಲೀಸರು ದೌಡಾಯಿಸಿ ಆತನನ್ನು ಕೆಳಗೆ ಇಳಿಸಿದ್ದಾರೆ.



# ಮಂಡ್ಯ ಜಿಲ್ಲೆಯಲ್ಲೀಗ ಕೋಮುಗಲಭೆ ಪ್ರಕರಣ ಹೆಚ್ಚಳ

**ಮಂಡ್ಯ:** ರಾಜ್ಯದ ಸಕ್ಕರೆ ನಾಡು ಮಂಡ್ಯ ಕೋಮು ಸಾಮರಸ್ಯ ಕುಸಿತದ ಕಾರಣಕ್ಕೆ ಈಗ ಮುಂದಿದೆ.

ಗಣೇಶ ಹಬ್ಬದ ಸಂದರ್ಭದಲ್ಲಿ ನಡೆದ ಕೋಮುಘರ್ಷಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯಾದ್ಯಂತ ದಾಖಲಾಗಿರುವ 70 ಪ್ರಕರಣಗಳಲ್ಲಿ 34 ಪ್ರಕರಣ (ಶೇ.48.57) ಮಂಡ್ಯ ಜಿಲ್ಲೆಯಲ್ಲಿ ವರದಿಯಾಗಿವೆ.

ಶ್ರೀರಂಗಪಟ್ಟಣದಲ್ಲಿ ಹಿಂದೂ ಗುಂಪುಗಳು ಆಯೋಜಿಸುವ ವಾರ್ಷಿಕ ಸಂಕೀರ್ತನ ಯಾತ್ರೆಯು ಒಂದು ಘರ್ಷಣಾ ಕೇಂದ್ರವಾಗಿದೆ. ಕೆರಗೋಡು ಗ್ರಾಮದಲ್ಲಿ ಹನುಮಾನ್ ಧ್ವಜಾರೋಹಣ ವಿಷಯ ಜಿಲ್ಲೆಯಾದ್ಯಂತ ವ್ಯಾಪಕ ಅಶಾಂತಿಗೆ ಕಾರಣವಾಗಿತ್ತು. ನಾಗಮಂಗಲ ತಾಲೂಕಿನಲ್ಲಿ ಗಣೇಶ ಮೆರವಣಿಗೆ ಸಂದರ್ಭದಲ್ಲಿ ಕೋಮು ಘರ್ಷಣೆ, ನಂತರ ಮದ್ದೂರು ತಾಲೂಕಿನಲ್ಲಿ ಗಣೇಶ ಮೂರ್ತಿ ಮೆರವಣಿಗೆಯ ಸಂದರ್ಭದಲ್ಲಿ ಕಲ್ಲು ತೂರಾಟ ಹಾಗೂ ಹಿಂಸಾಚಾರದ ಘಟನೆ ನಡೆದಿತ್ತು. ವಿಧಾನ ಪರಿಷತ್ತಿನಲ್ಲಿ ಎಂಎಲ್‌ಸಿ ಪುಟ 2ಕ್ಕೆ



# ವೈರಮುಡಿ ಉತ್ಸವಕ್ಕೆ ಚಾಲನೆ

## ಮೇಲುಕೋಟೆ ಚೆಲುವ ನಾರಾಯಣಸ್ವಾಮಿಗೆ ಕಿರೀಟಧಾರಣೆ

**ಮಂಡ್ಯ:** ಜಿಲ್ಲಾ ಖಜಾನೆಯಿಂದ ವೈರಮುಡಿಯನ್ನು ಸರ್ಕಾರಿ ಗೌರವದೊಂದಿಗೆ ಬಿಗಿ ಭದ್ರತೆಯಲ್ಲಿ ಮೇಲುಕೋಟೆ ದೇಗುಲಕ್ಕೆ ಶನಿವಾರ ಹಸ್ತಾಂತರಿಸಲಾಯಿತು. ಈ ಮೂಲಕ ವಿಶ್ವ ಪ್ರಸಿದ್ಧ ವೈರಮುಡಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ಮೇಲುಕೋಟೆ ಚೆಲುವ ನಾರಾಯಣಸ್ವಾಮಿಗೆ ಶನಿವಾರ ರಾತ್ರಿ ವೈರಮುಡಿ ಕಿರೀಟಧಾರಣೆ ನಡೆಯಿತು.

ಜಿಲ್ಲಾ ಖಜಾನೆಯಿಂದ ಜಿಲ್ಲಾಧಿಕಾರಿ ಡಾ.ಕುಮಾರ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾರಾಣಿ ಅವರು ತಲೆ ಮೇಲೆ ಹೊತ್ತು ತಂದು ಖಜಾನೆ ದ್ವಾರದಲ್ಲಿರಿಸಿ ಪೂಜೆ ನೆರವೇರಿಸಿದರು. ಈ ಸಂದರ್ಭ ಜಿ.ಪಂ. ಮುಖ್ಯ ಕಾರ್ಯನಿರ್ವಾಣಾಧಿಕಾರಿ ಕೆ.ಆರ್.ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ ಉಪಸ್ಥಿತರಿದ್ದರು.

ವೈರಮುಡಿಗೆ ನಗರದ ಲಕ್ಷ್ಮಿಜನಾರ್ಧನ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ಮೇಲುಕೋಟೆಗೆ ಹೋಗುವ ದಾರಿಯುದ್ದಕ್ಕೂ ಗ್ರಾಮಗಳಲ್ಲಿ ಪೂಜೆ ಸಲ್ಲಿಸಲಾಯಿತು. ಸಂಜೆ ಮೇಲುಕೋಟೆಗೆ ತಲುಪಿದ ವೈರಮುಡಿಗೆ ಅಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಪರ್ಕಾವಣೆ ನಡೆಸಿ ದೇವರಿಗೆ ತೊಡಿಸಲಾಯಿತು.

ಸುಮಾರು ಎರಡು ಲಕ್ಷ ಭಕ್ತರು ಮತ್ತು ಸಾರ್ವಜನಿಕರು ಭಾಗವಹಿಸಲಿರುವ ಹಿನ್ನೆಲೆ ದೇವಾಲಯ ಮತ್ತು ಇತರೆ ಇಲಾಖೆಗಳಿಂದ ಕ್ಷೇತ್ರದಲ್ಲಿ ಪೂರ್ವಸಿದ್ಧತೆ ಮತ್ತು ಮುಂಜಾಗ್ರತಾ ಕ್ರಮಕೈಗೊಳ್ಳಲಾಗಿದೆ.

ಭಕ್ತರ ಅನುಕೂಲಕ್ಕಾಗಿ ಸುಮಾರು 140 ಸಾರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಮೇಲುಕೋಟೆಯ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಎದುರಿನ ಪುಟ 2ಕ್ಕೆ

# ಕೇಂದ್ರದ ಮೇಲಿನ ದ್ವೇಷಕ್ಕೆ ಹಿಂದಿ ಮೇಲೆ ಸೇಡು: ವಿಜಯೇಂದ್ರ ಟೀಕೆ

**ಬೆಂಗಳೂರು:** ಕೇಂದ್ರ ಸರಕಾರದ ಮೇಲಿನ ದ್ವೇಷದಿಂದ ರಾಜಕೀಯ ವಿರೋಧಕ್ಕಾಗಿ ರಾಜ್ಯ ಸರ್ಕಾರ ಮಕ್ಕಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿದೆ. ರಾಜ್ಯ ಸರ್ಕಾರದ ತೀರ್ಮಾನ ವಿವೇಕ ರಹಿತ ಹಾಗೂ ಆಘಾತಕಾರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು.



ರಾಜ್ಯ ಸರ್ಕಾರದ ದ್ವಿಭಾಷಾ ನೀತಿ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಏಕಾಏಕಿ ಹಿಂದಿ ಭಾಷೆ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ. ಅದರಲ್ಲೂ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಹಠಾತ್ ನಿಲುವು ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ ಎಂದು ಆರೋಪಿಸಿದರು.

ಕಳೆದ ಹಲವು ದಶಕಗಳಿಂದ ದೇಶದಲ್ಲೇ ಮಾದರಿ ಶಿಕ್ಷಣದಲ್ಲಿ ತ್ರಿಭಾಷಾ ನೀತಿ ಹೊಂದಿರುವ ಕರ್ನಾಟಕದಲ್ಲಿ ಯಾವುದೇ ಪೂರ್ವಾಪರ ಚರ್ಚೆ, ಶಿಕ್ಷಣ ತಜ್ಞರ ಸಲಹೆ, ಪ್ರತಿಪಕ್ಷಗಳ ನಿಲುವು ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ಏಕಾಏಕಿ ಹಿಂದಿ ಭಾಷೆ ಕೈಬಿಡುವ ನಿಲುವು ತೆಗೆದುಕೊಂಡಿರುವುದು ಆಘಾತಕಾರಿ ಬೆಳವಣಿಗೆ. ಅದರಲ್ಲೂ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದ ಹಠಾತ್ ನಿಲುವು ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಕನ್ನಡ ಮಾಧ್ಯಮದಲ್ಲಿ ಕಲಿಕೆಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ಕನ್ನಡ ನಮ್ಮ ಮಾತೃಭಾಷೆ. ಕನ್ನಡವು ನಮ್ಮ ಬೋಧನಾ ಭಾಷೆಯಾಗಿ ಜಾಗತಿಕ ದೃಷ್ಟಿಕೋನದಿಂದ ಇಂಗ್ಲಿಷ್ ಕಲಿಕೆಗೂ ನಮ್ಮ ಅಭ್ಯಂತರವಿಲ್ಲ. ಕನ್ನಡಿಗರು ದೇಶದ ಅನೇಕ ರಾಜ್ಯಗಳಿಗೆ ಉದ್ಯೋಗ ಅರಸಿ ಹೋದಾಗ ಪುಟ 2ಕ್ಕೆ

# ಮಕ್ಕಳ ಹಿತದೃಷ್ಟಿಯಿಂದ ದ್ವಿಭಾಷಾ ನೀತಿ

## ಬಿ.ವೈ.ವಿಜಯೇಂದ್ರ ಹೇಳಿಕೆಗೆ ಮಧು ಬಂಗಾರಪ್ಪ ತಿರುಗೇಟು

**ಬೆಂಗಳೂರು:** ರಾಜ್ಯದಲ್ಲಿ ಮಕ್ಕಳ ಹಿತದೃಷ್ಟಿಯಿಂದ ದ್ವಿಭಾಷಾ ಸೂತ್ರ ಅಳವಡಿಕೆಗೆ ನಮ್ಮ ಸರ್ಕಾರ ಮುಂದಾಗಿದೆ. ನಾವು ತೆಗೆದುಕೊಳ್ಳುವ ಯಾವ ನಿರ್ಧಾರ ಕೂಡ ಮಕ್ಕಳ ಹಿತದೃಷ್ಟಿಗೆ ಪೂರಕವಾಗಿದೆ. ಮಕ್ಕಳ ಶಿಕ್ಷಣಕ್ಕೆ ಒತ್ತಡ ಬೀಳಬಾರದು ಎಂದು ಗ್ರೇಡಿಂಗ್ ವ್ಯವಸ್ಥೆ ತಂದಿದ್ದೇವೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಮಾಧ್ಯಮ ಪ್ರತಿನಿಧಿಗಳ ಜೊತೆ ಶನಿವಾರ ಮಾತನಾಡಿದ ಅವರು, ದ್ವಿಭಾಷಾ ಸೂತ್ರ ಅಳವಡಿಕೆಗೆ ಒತ್ತು ನೀಡಲಾಗುತ್ತದೆ. ನಮ್ಮ ಭಾಷೆ, ನೆಲಜಲಗಳನ್ನು ನಮ್ಮ ಪೂರ್ವಿಕರು ಕಾಪಾಡಿಕೊಂಡು ಬಂದಿದ್ದಾರೆ. ಗೋಕಾಕ್ ಚಳವಳಿಯಂತಹ ಚಳವಳಿಗಳಿಂದ ನಮಗೆ ಅನುಕೂಲ ಆಗಿದೆ. ನಮ್ಮ ರಾಜ್ಯದ ಮಕ್ಕಳ ಹಿತದೃಷ್ಟಿಯಿಂದ ನಾವು ಈ ನಿಯಮ ಜಾರಿಗೆ ತಂದಿದ್ದೇವೆ ಎಂದು ಹತ್ತನೇ ತರಗತಿಯಲ್ಲಿ ಮೂರನೇ ಭಾಷೆಗೆ ಗ್ರೇಡಿಂಗ್ ನೀಡುವ ರಾಜ್ಯ ಸರ್ಕಾರದ ಕ್ರಮವನ್ನು ಸಚಿವರು ಸಮರ್ಥಿಸಿಕೊಂಡರು.

ಅಧಿವೇಶನ ಮುಗಿದ ಬಳಿಕ ಜಾರಿ ಮಾಡಲು ತೀರ್ಮಾನಿಸಲಾಗಿತ್ತು. ಬೇರೆ ಭಾಷೆ ದ್ವೇಷ ಮಾಡಬಾರದು. ಬೇರೆ ಭಾಷೆ ಹೇರಬಾರದು. ಮಕ್ಕಳ ಮೇಲೆ ಒತ್ತಡ ಹಾಕಬಾರದು. ದ್ವಿಭಾಷಾ ಸೂತ್ರ ಅಳವಡಿಕೆಗೆ ಸಾಹಿತಿಗಳು, ಕನ್ನಡ ಪರ ಸಂಘಟನೆಗಳು ಮನವಿ ಮಾಡಿದ್ದರು. ಅವರ ಜೊತೆ ಚರ್ಚೆಮಾಡಿ ನಾವು ತೀರ್ಮಾನ ಮಾಡಿದ್ದೇವೆ. ಸಿಎಂ ಸಿದ್ದರಾಮಯ್ಯ ಜೊತೆ ಮಾತಾಡಿದ್ದೇವೆ ಎಂದು ತಿಳಿಸಿದರು.

ಈಗ ತಂದಿರುವ ಗ್ರೇಡಿಂಗ್ ವ್ಯವಸ್ಥೆ ಬಗ್ಗೆ ವಿಶಾಲವಾಗಿ ಚರ್ಚೆಯಾಗುತ್ತದೆ. ವಿಧಾನಸಭೆ ಅಧಿವೇಶನದಲ್ಲಿ ಮಂಡಿಸುತ್ತೇವೆ. ವಿಧಾನ ಪರಿಷತ್ ನಲ್ಲಿ ಒಪ್ಪಿಗೆ ಪಡೆದ ನಂತರವೇ ಕಾನೂನು ಜಾರಿಗೆ ಬರುವುದು ಎಂದು ಹೇಳಿದರು.

ಶಿಕ್ಷಣ ಸಚಿವರಾಗಿದ್ದ ಸುರೇಶ್ ಕುಮಾರ್ ಅವರು ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು. ಪುಟ 2ಕ್ಕೆ



# ಬೈಕ್‌ಗೆ ಲಾರಿ ಡಿಕ್ಕಿ: ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು



**ನೆಲಮಂಗಲ:** ಬಿರಿಯಾನಿ ತಿನ್ನಲು ರಾತ್ರಿ ಹೋಗಿದ್ದಾಗ ಬೈಕ್‌ಗೆ ಲಾರಿ ಡಿಕ್ಕಿಯಾಗಿ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವನಪ್ಪಿರುವ ಘಟನೆ ನೆಲಮಂಗಲ–ಹಾಸನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದೆ. ಅಭಿಲಾಷ್ (21), ಮನೋಜ್ (21) ಹಾಗೂ ನವೀನ್ (21) ಮೃತ ವಿದ್ಯಾರ್ಥಿಗಳು ಎಂದು ಗುರುತಿಸಲಾಗಿದೆ.


ಬೆಂಗಳೂರಿನ ಪಿಜಿಯೊಂದರಲ್ಲಿ ವಾಸವಾಗಿದ್ದ ಪುಟ 2ಕ್ಕೆ

# ಭೀಕರ ಅಪಘಾತ: ಒಂದೇ ಕುಟುಂಬದ ಮೂವರು ಸಾವು

**ಬೆಂಗಳೂರು:** ನಗರದಿಂದ ತಿರುಪತಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಹೊರಟಿದ್ದ ಒಂದೇ ಕುಟುಂಬದ ಮೂವರು ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂಗಾರುಪಾಳ್ಯಂ ಪಲಮಕುಲಪಲ್ಲಿ ಬಳಿ ಅಪಘಾತ ಸಂಭವಿಸಿದೆ. ಭೀಕರ ಅಪಘಾತದಲ್ಲಿ ಬೆಂಗಳೂರು ಮೂಲದ ದಂಪತಿ ಹಾಗೂ 4 ವರ್ಷದ ಹೆಣ್ಣು ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಾರು ಚಾಲಕನ ಸ್ಥಿತಿ ಗಂಭೀರವಾಗಿದೆ.

ಪಲಮನೇರ್‌ನಿಂದ ಚಿತ್ತೂರಿಗೆ ಬರುತ್ತಿದ್ದ ಬಸ್ ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಂಗಾರುಪಾಳ್ಯಂ ಪಲಮಕುಲಪಲ್ಲಿ ಬಳಿ ನಿಂತಿತ್ತು. ಈ ವೇಳೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ದಂಪತಿ ಹಾಗೂ ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಾರಿನಲ್ಲೇ ಮೃತದೇಹಗಳು ಸಿಲುಕಿಕೊಂಡಿದ್ದವು. ಪುಟ 2ಕ್ಕೆ



# ಸಾವಿರಾರು ಬಾರಿ ಬಾಂಬ್ ಬೆದರಿಕೆ: ಮೈಸೂರಿನಲ್ಲಿ ಆರೋಪಿ ಬಂಧನ

**ಮೈಸೂರು:** ದೇಶದ ನಾನಾ ಭಾಗಗಳ ಪ್ರಮುಖ ಸ್ಥಳಗಳಲ್ಲಿ ವಿಧ್ವಂಸಕ ಕೃತ್ಯ ನಡೆಸುವುದಾಗಿ ಇಮೇಲ್ ರವಾನಿಸುತ್ತಿದ್ದ ವ್ಯಕ್ತಿಯನ್ನು ದೆಹಲಿ ಪೊಲೀಸರು ಮೈಸೂರಿನಲ್ಲಿ ಶನಿವಾರ ಬಂಧಿಸಿದ್ದಾರೆ.



ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ಶ್ರೀನಿವಾಸ್ ಅಲಿಯಾಸ್ ಶ್ರೀನಿವಾಸ್ ಲೂಯಿಸ್ ಬಂಧಿತ ಆರೋಪಿ ಎಂದು ಗುರುತಿಸಲಾಗಿದೆ. ಈತ ದೇಶದ ನಾನಾ ಭಾಗಗಳಿಗೆ ಒಟ್ಟು 1,100ಕ್ಕೂ ಹೆಚ್ಚು ಬಾಂಬ್ ಬೆದರಿಕೆ ಇಮೇಲ್ ಮಾಡಿ ವಿಧ್ವಂಸಕ ಕೃತ್ಯ ನಡೆಸುವ ಆತಂಕ ಸೃಷ್ಟಿಸಿದ್ದ. ನ್ಯಾಯಾಲಯಗಳು, ವಿವಿಧ ನಗರಗಳ ಪ್ರತಿಷ್ಠಿತ ಶಾಲೆ ಕಾಲೇಜುಗಳು, ಸರ್ಕಾರಿ ಕಚೇರಿಗಳು ಸೇರಿದಂತೆ ರೈಲು ನಿಲ್ದಾಣ, ವಿಮಾನ ನಿಲ್ದಾಣಕ್ಕೆ ಕೂಡ ಬಾಂಬ್ ಇಟ್ಟಿರುವ ಬಗ್ಗೆ ಕರೆ ಮಾಡುವುದು, ಇಮೇಲ್ ಮಾಡುವುದನ್ನು ಪುಟ 2ಕ್ಕೆ

# 48 ಕೆಜಿ ಡ್ರಗ್ಸ್ ವಶ: ಇಬ್ಬರ ಬಂಧನ

## ಮೈಸೂರು ಗ್ರಾಮಾಂತರ ಪ್ರದೇಶಕ್ಕೂ ವಿಸ್ತರಿಸಿದ ಡ್ರಗ್ಸ್ ಜಾಲ

**ಮೈಸೂರು:** ಹುಣಸೂರು ತಾಲ್ಲೂಕಿನ ದಾಸನಪುರ ಗ್ರಾಮದಲ್ಲಿ 12 ಕೋಟಿ ಮೌಲ್ಯದ 48 ಕೆಜಿ ತೂಕದ ಡ್ರಗ್ಸ್ ತಯಾರಿಕೆಗೆ ಬಳಸುವ ಕಚ್ಚಾ ವಸ್ತುವನ್ನ ಪೊಲೀಸರು ದಾಳಿ ಮಾಡಿ ವಶಪಡಿಸಿಕೊಂಡಿದ್ದಾರೆ. ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ಮಾಡಿ ಸಿಂಥೆಟಿಕ್ ಡ್ರಗ್ಸ್ ತಯಾರು ಮಾಡಲು ಇಟ್ಟಿದ್ದ ಕಚ್ಚಾವಸ್ತುಗಳನ್ನ ವಶಕ್ಕೆ ಪಡೆದಿದ್ದಾರೆ. ಸ್ಥಳದಲ್ಲಿದ್ದ ಆರೋಪಿಗಳಾದ ಮೊಹಮದ್ ಶರೀಫ್ ಹಾಗೂ ಜಮೀನಿನ ಮಾಲೀಕ ಇಬ್ರಾಹಿಂ ಖಾನ್ ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದರು.

ಮೈಸೂರು ನಗರ ವ್ಯಾಪ್ತಿಯಲ್ಲಿ ಕಂಡುಬರುತ್ತಿದ್ದ ಡ್ರಗ್ಸ್ ಜಾಲ ಈಗ ಗ್ರಾಮಾಂತರ ಪ್ರದೇಶದಲ್ಲೂ ಕಂಡುಬರುತ್ತಿದೆ. ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ದಾಸನಪುರ ಗ್ರಾಮದ ಪಕ್ಕದಲ್ಲಿರುವ ಆಸ್ಪತ್ರೆ ಕಾವಲು ಎಂಬಲ್ಲಿ ಹುಣಸೂರು ರೆಹಮತ್ ಮೊಹಲ್ಲಾದ ನಿವಾಸಿಯಾದ ಇಬ್ರಾಹಿಂ ಖಾನ್ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಮಹಮದ್ ಇರ್ಫಾನ್ ಹಾಗೂ ಇತರರು ಶೆಡ್ ನಿರ್ಮಿಸಿಕೊಂಡಿದ್ದರು. ಅವರು ಅಲ್ಲಿ ಸಿಂಥೆಟಿಕ್ ಡ್ರಗ್ಸ್ ಎಂಬ ಅಮಲು ಬರುವ ಕಚ್ಚಾವಸ್ತುಗಳನ್ನ ಶೇಖರಿಸುತ್ತಿದ್ದರು ಎಂದು ಎಸ್ಪಿ ತಿಳಿಸಿದರು.

ಜಿಲ್ಲಾ ಪೊಲೀಸರು ಕಳೆದ ಮೂರು ತಿಂಗಳಲ್ಲಿ ಮಾದಕ ವಸ್ತು ವಿರುದ್ಧ ಕಾರ್ಯಾಚರಣೆ ನಡೆಸಿ 77 ಪ್ರಕರಣ ದಾಖಲಿಸಿದ್ದಾರೆ. ಇದರಲ್ಲಿ 63 ಮಂದಿ ಸೇವನೆ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರ ಮೇಲೆ ಸನ್ನಿತ್ರ ಪುಟ 2ಕ್ಕೆ



ಯುವಕರಲ್ಲಿ ಡ್ರಗ್ಸ್ ಸೇವನೆ ಬಹಳ ಹೆಚ್ಚಾಗಿದೆ. ಡ್ರಗ್ಸ್ ಪ್ರಕರಣಗಳಿಗೆ ಕಡಿವಾಣ ಹಾಕಲು ಜಿಲ್ಲಾ ಪೊಲೀಸರು ಕಾರ್ಯಾಚರಣೆ ಮಾಡುತ್ತಿದ್ದಾರೆ. ಡ್ರಗ್ಸ್ ಜಾಲ ಮೈಸೂರೊಂದರಲ್ಲೇ ಇಲ್ಲ. ಅಂತಹ ಪ್ರಕರಣಗಳ ತಡೆಗಟ್ಟುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತದೆ.

» **ಎಚ್.ಸಿ.ಮಹದೇವಪ್ಪ** ಸಚಿವ

### ಡ್ರಗ್ಸ್ ಜಾಲಕ್ಕೆ ಮುಂಬೈ ಲಿಂಕ್

ಮೈಸೂರು ಜಿಲ್ಲೆಯ ಡ್ರಗ್ಸ್ ತಯಾರಿಕೆ ಜಾಲಕ್ಕೆ ಮುಂಬೈ ನಂಟಿದೆ. ಕಚ್ಚಾವಸ್ತುಗಳನ್ನ ಬೇರೆ ಕಡೆಯಿಂದ ತಂದು ಒಂಟಿ ಮನೆಯಲ್ಲಿ ಕಳೆದ 6 ದಿನಗಳ ಹಿಂದೆ ಇರಿಸಲಾಗಿತ್ತು. ಹುಣಸೂರು ಗ್ರಾಮಾಂತರ ಪೊಲೀಸರು ಪುಟ 2ಕ್ಕೆ

ನಾವು ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಕೆಲಸ ಮಾಡುತ್ತಿದ್ದೇವೆ. ಪೊಲೀಸರು ರೇಡ್ ಮಾಡಿದ ವಿಚಾರ ಗೊತ್ತಾಗಿದೆ. ಡ್ರಗ್ಸ್ ಜಾಲದ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದೇನೆ.

» **ಸಿದ್ದರಾಮಯ್ಯ** ಸಿಎಂ

# 120 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ: ಎಚ್‌ಸಿಎಂ



**ಮೈಸೂರು:** ನಗರದ ಬನ್ನಿಮಂಟಪದಲ್ಲಿ ನೂತನವಾಗಿ ನಿರ್ಮಾಣ ಮಾಡುತ್ತಿರುವ ಹೊಸ ಬಸ್ ನಿಲ್ದಾಣ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹದೇವಪ್ಪ ಶನಿವಾರ ಪರಿಶೀಲನೆ ಮಾಡಿದರು.

ಬನ್ನಿಮಂಟಪದಲ್ಲಿ 120 ಕೋಟಿ ರೂ.ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುತ್ತಿದೆ. ಈಗ ಶೇ.30 ರಷ್ಟು ಕಾಮಗಾರಿ ಪೂರ್ಣಗೊಂಡಿದೆ. 2027ರೊಳಗಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಹಾಗೂ ಗುಣಮಟ್ಟದ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಕೆ.ಎಸ್.ಆರ್.ಟಿ.ಸಿ ಗ್ರಾಮೀಣ ವಿಭಾಗದ ಜಿಲ್ಲಾ ನಿಯಂತ್ರಕ ಶ್ರೀನಿವಾಸ್ ಪುಟ 2ಕ್ಕೆ

ವರ್ತಮಾನ
ಭಾನುವಾರ
ಮಾರ್ಚ್ 29, 2026

# ಬಡವರಿಗೆ ಉಚಿತ ಚಿಕಿತ್ಸೆ ನೀಡಿ: ಸಿಎಂ ಸಿದ್ದರಾಮಯ್ಯ





ಮೈಸೂರು: ಡಾಕ್ಟರ್ ಗಿರೀಶ್ ಚಂದ್ರ ವೈದ್ಯರಾಗಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ. ಸಮಾಜದ ಲ್ಲಿರುವ ಬಡವರಿಗೆ ಸಾಧ್ಯವಾದರೆ ಉಚಿತವಾಗಿ ಇಲ್ಲದಿದ್ದರೆ ಕಡಿಮೆ ಹಣದಲ್ಲಿ ಚಿಕಿತ್ಸೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು ಹೇಳಿದರು.

ಮೈಸೂರಿನ ವಿಶ್ವೇಶ್ವರನಗರದಲ್ಲಿ ನೂತನವಾಗಿ ನಿರ್ಮಿಸಿರುವ ಜೆ ಸಿ ಸ್ಪೋರ್ಟ್ಸ್ ಮೆಡಿಸನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ಸರ್ಕಾರ ಶಿಕ್ಷಣ, ಕಾನೂನು ವ್ಯವಸ್ಥೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದೆ. ಜೆಸಿ ಸ್ಪೋರ್ಟ್ಸ್ ಮೆಡಿಸನ್ ಸೆಂಟರ್ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಾಪಕ ಡಾ.ಗಿರೀಶ್ ಚಂದ್ರ ನಿಪುಣ ವೈದ್ಯರಾಗಿದ್ದು, ಅವರ ತಂದೆಯವರೂ ಮೈಸೂರು ತಾಲ್ಲೂಕಿನ ಮೊದಲ ವೈದ್ಯರಾಗಿದ್ದರು. ಸಮಾಜದಲ್ಲಿ ಶಿಕ್ಷಣ ಹಾಗೂ ಆರೋಗ್ಯ ಪ್ರಮುಖ ವಾಗಿದ್ದು, ಮನುಷ್ಯ ಆರೋಗ್ಯದಿಂದ ಬದುಕುವುದು ಹೆಚ್ಚು ಮುಖ್ಯ ಎಂದರು.

ಮೈಸೂರು ಜಿಲ್ಲೆಯವನೇ ಆದ ನನ್ನ ಮೇಲೆ ಇಲ್ಲಿನ ಜನರ ಋಣವಿದೆ. ಆದ್ದರಿಂದ ಮೈಸೂರಿನ ಅಭಿ ವೃದ್ಧಿಗೆ ವಿಶೇಷ ಆದ್ಯತೆ ನೀಡಿದ್ದೇನೆ. ಸಮಾಜಮುಖಿ ಯಾಗುವ ಮೂಲಕ ಮನುಷ್ಯ ತನ್ನ ಬದುಕನ್ನು ಸಾರ್ಥ ಕಗೊಳಿಸಿಕೊಳ್ಳಬೇಕು ಎಂದರು. ಸಮಾಜದಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ಬಂದಾಗ ಮಾತ್ರ ಸ್ವಾತಂತ್ರ್ಯ ಸಾರ್ಥಕವಾಗುತ್ತದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ತಿಳಿಸಿದ್ದರು. ಎಲ್ಲರಿಗೂ ಸಾಮಾಜಿಕ, ಆರ್ಥಿಕವಾಗಿ ಸಫಲರಾಗುವ ದಿಕ್ಕಿನಲ್ಲಿ ಸರ್ಕಾರ ದೃಢವಾದ ಹೆಜ್ಜೆಗಳಲ್ಲಿಟ್ಟಿದೆ. ನುಡಿದಂತೆ ನಡೆಯುವುದು ಕಷ್ಟದ ಕೆಲಸವಾದರೂ ನುಡಿದಂತೆ ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಹೊಟ್ಟೆ ತುಂಬಾ ಊಟವಿಲ್ಲದವರು, ಬಟ್ಟೆಯಿಲ್ಲ ದವರು ನಿಜವಾದ ಬಡವರು. ಸಮಸಮಾಜ ನಿರ್ಮಾಣವಾಗಬೇಕಾದರೆ ಬಡವರಿಗೆ ಸಾಮಾಜಿ ಕವಾಗಿ, ಆರ್ಥಿಕವಾಗಿ ಶಕ್ತಿ ಬರಬೇಕು ಎಂದರು. ಅಸಮಾನತೆಯನ್ನು ಹೋಗಲಾಡಿ ಸಬೇಕು. ನಮ್ಮ ನಾಡಿನಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಅಂಥವರು ಬಂದು ಹೋಗಿದ್ದು ಅವರು ಏನು ಹೇಳಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಗಾಂಧೀಜಿ ಅಂತ್ಯೋದಯ, ಸರ್ವೋದಯ ಮಂತ್ರ ವನ್ನು ನೀಡಿದ್ದಾರೆ. ಎಲ್ಲರಿಗೂ ಸ್ವಾವಲಂಬನೆ ಬರಬೇಕು ಎಂದಿದ್ದರು ಎಂದು ತಿಳಿಸಿದರು. ಜೀವನದಲ್ಲಿ ಒಳ್ಳೆಯ ದನ್ನು ಮಾಡಬೇಕು. ಎಷ್ಟು ಹಣವಿದ್ದರೂ ಆರೋಗ್ಯವಿ ಲ್ಲದಿದ್ದರೆ ಪ್ರಯೋಜನವಿಲ್ಲ ಎಂದರು. ಜನರು ಸ್ಮರಿಸುವ ಕೆಲಸವನ್ನು ಮಾಡಬೇಕೆಂದು ಹೇಳಿದರು.

## ಮೊದಲ ಪುಟದಿಂದ

### ಡ್ರಗ್ಸ್ ವಶ: ಇಬ್ಬರ ಬಂಧನ

ಯೋಜನೆಯಡಿ ನಿಗಾವಹಿಸಲಾಗಿತ್ತು. ಈ ಮೂಲಕವೇ ಈ ಜಾಲ ಪತ್ತೆಯಾಗಿರುವುದು ವಿಶೇಷವಾಗಿದೆ.

### ಡ್ರಗ್ಸ್ ಜಾಲಕ್ಕೆ ಮುಂಬೈ ಲಿಂಕ್

ದಾಳಿ ಮಾಡಿ ಇಬ್ಬರು ಆರೋಪಿಗಳನ್ನ ಬಂಧಿಸಿದ್ದಾರೆ. ಇನ್ನಿಬ್ಬರು ತಪ್ಪಿಸಿಕೊಂಡಿದ್ದಾರೆ. ಈ ಜಾಲದಲ್ಲಿ 6 ಜನರಿದ್ದಾರೆ. ಇದರಲ್ಲಿ ಇಬ್ಬರು ಸ್ಥಳೀಯರು, 4 ಜನ ಮುಂಬೈ ಮೂಲದವರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ತನಿಖಾ ತಂಡ ರಚಿಸಲಾಗಿದೆ ಎಂದು ಎಸ್ಪಿ ತಿಳಿಸಿದರು. ಮೈಸೂರು ಮಾದಕ ವಸ್ತು ಜಾಲ ಮುಂಬೈ ಸೇರಿ ಅನೇಕ ರಾಜ್ಯಗಳಲ್ಲಿ ಹರಡಿರುವ ಹಿನ್ನೆಲೆಯಲ್ಲಿ ಅದನ್ನು ಪತ್ತೆ ಹಚ್ಚಲು ಡಿವೈಎಸ್ಪಿ ನೇತೃತ್ವದಲ್ಲಿ ಮೂರು ತಂಡಗಳನ್ನು ರಚಿಸಲಾಗಿದೆ. ಜಾಲದಲ್ಲಿನ ರೂವಾರಿಗಳ ಪತ್ತೆಗೆ ಪೊಲೀಸರು, ನೆರೆ ರಾಜ್ಯದ ಪೊಲೀಸರ ಸಹಕಾರವನ್ನು ಕೇಳಿ ಶೀಘ್ರದಲ್ಲೇ ಎಲ್ಲರನ್ನು ಬಂಧಿಸಿ ಪೂರ್ಣ ಜಾಲ ಬೇಧಿಸಲಾಗುವುದು ಎಂದು ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

### 120 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ

ಕಾಮಗಾರಿ ಕುರಿತು ಮಾಹಿತಿ ನೀಡಿದರು. ಬನ್ನಿಮಂಟಪದ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಿದೆ. ಕೆ.ಎಸ್.ಆರ್.ಟಿಸಿ ಬಸ್ ಗಳು ಬಸ್ ನಿಲ್ದಾಣದ ಒಳಗೆ ಹಾಗೂ ಹೊರ ಭಾಗಕ್ಕೆ ಹೋಗಲು ಪ್ರತ್ಯೇಕ 100 ಅಡಿ ರಸ್ತೆಯ ಅವಶ್ಯಕತೆ ಇದೆ ಎಂದು ಸಚಿವರ ಗಮನಕ್ಕೆ ತಂದರು. ಬಸ್ ನಿಲ್ದಾಣ ನಿರ್ಮಾಣಕ್ಕೆ ಬೇಕಿರುವ ಎಲ್ಲಾ ಸೌಲಭ್ಯವನ್ನು ಒದಗಿಸಲಾಗುವುದು. 100 ಅಡಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯೋಜನೆ ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸುವಂತೆ ಸಚಿವರು ತಿಳಿಸಿದರು.ಶಾಸಕ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಇದ್ದರು.

### ಹಿತದೃಷ್ಟಿಯಿಂದ ದ್ವಿಭಾಷಾ ನೀತಿ

ಕನ್ನಡಿಗರು ಸಾವಿರ ಭಾಷೆ ಕಲಿಯಲಿ. ಆದರೆ ಕನ್ನಡವನ್ನು ಕಡ್ಡಾಯವಾಗಿ ಓದಲಿ ಎಂದರು. ಬಿ.ವೈ ವಿಜಯೇಂದ್ರ ಪೋಸ್ಟ್ ಮಾಡಿದ್ದು ನೋಡಿದ್ದೇನೆ. ಯಡಿಯೂರಪ್ಪ ಅವರಿಗೆ ಇದ್ದ ಕನ್ನಡ ಅಭಿಮಾನ ವಿಜಯೇಂದ್ರ ಅರ್ಥ ಮಾಡಿಕೊಂಡರೆ ಒಳ್ಳೆಯದು ಎಂದು ತಿರುಗೇಟು ನೀಡಿದರು.

### ಕುಟುಂಬದ ಮೂವರು ಸಾವು

ಚಾಲಕನ ಸ್ಥಿತಿ ಗಂಭೀರವಾಗಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಪೊಲೀಸರು ಬೆಂಗ ಳೂರು ಮೂಲದ ದಂಪತಿ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

ಬೆಂಗಳೂರಿನಲ್ಲಿದ್ದ ಕುಟುಂಬ ಶನಿವಾರ ಮಧ್ಯಾಹ್ನ 12 ಗಂಟೆಗೆ ತಿರುಪತಿ ವೆಂಕಟೇಶ್ವರ ಸ್ವಾಮಿ ದರ್ಶನಕ್ಕೆ ಟಿಕೆಟ್ ಪಡೆದುಕೊಂಡಿತ್ತು. ಆದರೆ ದುರಂತದಲ್ಲಿ ಪ್ರಾಣ

ಕಳೆದುಕೊಂಡಿದ್ದಾರೆ. ಅಪಘಾತದ ಬಳಿಕ ಬಸ್‌ನ ಹಿಂಭಾಗಕ್ಕೆ ಸಿಲುಕಿಕೊಂಡಿದ್ದ ಕಾರನ್ನು ಪೊಲೀಸರು ಜೆಸಿಬಿ ಮೂಲಕ ಹೊರತೆಗೆದಿದ್ದಾರೆ. ಕಾರು ಚಾಲಕನ ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

### ಮೈಸೂರಿನಲ್ಲಿ ಆರೋಪಿ ಬಂಧನ

ಮಾಡಿದ್ದ ಎನ್ನಲಾಗಿದೆ. ಆರೋಪಿಯ ಮನೆಯಲ್ಲಿ ಹಲವು ಸಿಮ್‌ಗಳು ಹಾಗೂ ಲ್ಯಾಪ್ ಟ್ಯಾಪ್‌ನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆರೋಪಿ ಶ್ರೀನಿವಾಸ್‌ನನ್ನು ಹೆಚ್ಚಿನ ವಿಚಾರಣೆಗೆ ದೆಹಲಿ ಪೊಲೀಸರು ಕರೆದೊಯ್ದಿದ್ದಾರೆ.

### ವೈರಮುಡಿ ಉತ್ಸವಕ್ಕೆ ಚಾಲನೆ

ಅವರಣದಲ್ಲಿ ವಾಹನಗಳಿಗೆ ತಾತ್ಕಾಲಿವಾಗಿ ನಿಲ್ದಾಣ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್ ಸ್ಥಳದಿಂದ ದೇವಾಲಯದವರೆಗೆ ಓಡಾಡಲು ಎಲ್ಲಾ ಹಿರಿಯ ನಾಗರೀಕರಿಗೆ 5 ಉಚಿತ ಮಿನಿ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ದೇವಾಲಯದ ದಾಸೋಹ ಭವನದಲ್ಲಿ ವೈರಮುಡಿ ಬ್ರಹ್ಮೋತ್ಸವ ಅಂಗವಾಗಿ ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಚೆಲುವ ನಾರಾಯಣಸ್ವಾಮಿ ದೇವಾಲಯದ ಸುತ್ತ ಸುಮಾರು 40 ಶಾಶ್ವತ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ವಾಹನ ಪಾರ್ಕಿಂಗ್ ಮತ್ತು ಇತರ ಕಡೆಗಳಲ್ಲಿ ಹೆಚ್ಚುವರಿ 40 ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಕ್ರಮವಹಿಸಲಾಗಿದೆ.

### ಮೂವರು ವಿದ್ಯಾರ್ಥಿಗಳು ಸಾವು

ಅವರು ಶುಕ್ರವಾರ ರಾತ್ರಿ ಬಿರಿಯಾನಿ ತಿನ್ನಲು ಮೂವರು ಒಂದೇ ಬೈಕ್‌ನಲ್ಲಿ ಕುಣಿಗಲ್ ಕಡೆ ಹೋಗುತ್ತಿದ್ದರು. ಈ ವೇಳೆ ಮಾಗಡಿ ತಾಲ್ಲೂಕಿನ ಮರೂರು ಹ್ಯಾಂಡ್ ಪೋಸ್ಟ್ ಬಳಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು.

### ದ್ವೇಷಕ್ಕೆ ಹಿಂದಿ ಮೇಲೆ ಸೇಡು

ಕನಿಷ್ಠ ಮಟ್ಟದ ಹಿಂದಿ ಭಾಷೆ ಅರಿವು ಇರಬೇಕಾಗುತ್ತದೆ. ಕೇಂದ್ರ ಸರಕಾರದ ಉದ್ಯೋಗಗಳಿಗೆ ಸೇರ್ಪಡೆಗೊಳ್ಳುವ ಕರ್ನಾಟಕದ ಯುವ ಸಮೂಹವು ರಾಷ್ಟ್ರಮಟ್ಟದಲ್ಲಿ ಹಿಂದೆ ಬೀಳಬಾರದು ಎಂಬ ಕಾಳಜಿ ನಮ್ಮದು ಎಂದರು. ಕರ್ನಾಟಕದಲ್ಲಿ ಹಲವು ವರ್ಷಗಳಿಂದ ಅನುಸರಿಸಲಾಗುತ್ತಿರುವ ತ್ರಿಭಾಷಾ ಸೂತ್ರ ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್‌ನ್ನು ಸಂವಹನ ಭಾಷೆಯಾಗಿ ಹಾಗೂ ಹಿಂದಿಯನ್ನು ರಾಷ್ಟ್ರೀಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ. ಹಿಂದಿ ಭಾಷೆಯನ್ನು ಕೈಬಿಡುವುದಾದರೆ ಇದರ ಬಗೆಗೆ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಎಲ್ಲ ಭಾಷೆಯ ಸಾಹಿತಿಗಳು ಸೇರಿದಂತೆ ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸುವ ಅಗತ್ಯವಿದೆ ಎಂದು ಆಗ್ರಹಿಸಿದರು.

### ಮಂಡ್ಯ ಜಿಲ್ಲೆಯಲ್ಲೀಗ ಕೋಮುಗಲಭೆ ಪ್ರಕರಣ ಹೆಚ್ಚಳ

ಮಧು ಜಿ.ಮಾದೇಗೌಡ ಕೇಳಿದ ಪ್ರಶ್ನೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ ನೀಡಿರುವ ಮಾಹಿತಿಯಲ್ಲಿ ಈ ವಿಚಾರ ಬಯಲಾಗಿದೆ.

# ಧರ್ಮದ ಪ್ರತೀಕ ರಾಮ

## ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ | ವೇಷಭೂಷಣ ಸ್ಪರ್ಧೆ



ಮೈಸೂರು: ಶ್ರೀರಾಮನು ಸತ್ಯ, ತಾಳ್ಮೆ ಮತ್ತು ಧರ್ಮದ ಪ್ರತೀಕ ವಾಗಿದ್ದು, ಆತನ ಜೀವನದ ಆದರ್ಶಗಳನ್ನು ಪಾಲಿಸುವುದು ರಾಮನವಮಿಯ ಮುಖ್ಯ ಉದ್ದೇಶ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು

ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಕಲಾ ಉತ್ಸವ ಟ್ರಸ್ಟ್ ಹಾಗೂ ಶ್ರೀ ಮಹಾಜನ ಸಭಾ ಟ್ರಸ್ಟ್ ಶ್ರೀರಾಮ ಮಂದಿರವತಿಯಿಂದ ಶ್ರೀ ರಾಮ ನವಮಿ ಅಂಗವಾಗಿ ಆಯೋಜಿಸಿದ ಮಕ್ಕಳಿಗಾಗಿ ಶ್ರೀರಾಮ ಹಾಗೂ ಸೀತೆ ವೇಷಭೂಷಣ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಸಮಾಜದಲ್ಲಿ ಶಾಂತಿ ಒಗ್ಗಟ್ಟು ಉಳಿ ಯಲು ರಾಮರಾಜ್ಯದ ಕಲ್ಪನೆ ಅಗತ್ಯವಿದೆ. ರಾಮನವಮಿ ದಿನ ಮಾತ್ರವಲ್ಲದೆ ನಿತ್ಯ ರಾಮನ ಜಪಿಸುವುದರಿಂದ ಬದುಕು ಹಸನಾಗಲಿದೆ. ಇದು ರಾಮನ ಜನ್ಮದಿನ ಮಾತ್ರವಾಗಿರದೆ ವ್ಯಕ್ತಿಯ ಜೀವ ನಕ್ಕೆ ಅಗತ್ಯವಿರುವ ಸತ್ಯ ಧರ್ಮದ ದಾರಿದೀಪವಾಗಿದೆ ಎಂದರು.

ರಾಮನು ಮರ್ಯಾದೆ ಪುರುಷೋತ್ತಮ ಎಂಬ ಪದವಿ ಯನ್ನು ಪಡೆದಿದ್ದು, ಅವನ ಜೀವನದ ಪ್ರತಿಯೊಂದು ಕ್ಷಣವು ನಿಯಮ ಶಿಸ್ತು ಮತ್ತು ಧರ್ಮದ ಅನುಸರಣೆ ಎಂಬ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಅವನು ರಾಜಕುಮಾರನಾಗಿದ್ದರೂ ತಂದೆಯ ಮಾತಿಗೆ ಗೌರವ ನೀಡಿ ಅರಣ್ಯ ವಾಸವನ್ನು ಸ್ವೀಕರಿಸಿದಿದ್ದು ಪತ್ನಿ ಸೀತೆಯನ್ನು ರಕ್ಷಿಸಲು ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದು ಮತ್ತು ಕೊನೆಗೆ ರಾವಣನನ್ನು ಸಂಹರಿಸಿ ಧರ್ಮವನ್ನು ಸ್ಥಾಪಿಸಿದ್ದು ಇವೆಲ್ಲವೂ ಅವನ ಆದರ್ಶ ವ್ಯಕ್ತಿತ್ವದ ಉದಾಹರಣೆ ಗಳಾಗಿವೆ ಎಂದರು ಸಮಾಜ ಸೇವಕ ಕೆ.ರಘುರಾಮ್ ವಾಜಪಾಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರಾಮಮಂದಿರದ ಮಾಧವ ರಾವ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಕಲ ಉತ್ಸವ ಟ್ರಸ್ಟ್ ಅಧ್ಯಕ್ಷ ಅಮಿತ್, ಜಿ. ರಾಘವೇಂದ್ರ, ಜಗದೀಶ್, ಎಂ.ಆರ್.ಬಾಲಕೃಷ್ಣ, ಟಿ.ಎಸ್.ಅರುಣ್, ಚಕ್ರಪಾಣಿ, ನಿರೂಪಕ ಪುರುಷೋತ್ತಮ್, ವಿ.ಎನ್.ಕೃಷ್ಣ, ಸುಚಿಂದ್ರ, ಎಸ್.ಎನ್.ರಾಜೇಶ್, ರಾಕೇಶ್, ದುರ್ಗಾ ಪ್ರಸಾದ್, ಶಿವು ಇನ್ನಿತರರು ಹಾಜರಿದ್ದರು.

**50ಕ್ಕೂ ಹೆಚ್ಚು ಮಕ್ಕಳ ಕಲರವ**

**ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಮಕ್ಕಳು ರಾಮ ಸೀತೆ ವೇಷಧರಿಸಿ ಗಮನ ಸೆಳೆದರು. ಸ್ಪರ್ಧಿಸಿದ ಎಲ್ಲ ಮಕ್ಕಳಿಗೂ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ವಿತರಿಸಿ ನಂತರ ಪ್ರಸಾದ ವಿತರಿಸಲಾಯಿತು.**

## ವರ್ತುಲ ರಸ್ತೆ ಸ್ವಚ್ಛತಾ ಆಂದೋಲನ



ಮೈಸೂರು: ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾ ಡುವ ನಿಟ್ಟಿನಲ್ಲಿ ಸಾರ್ವಜನಿಕರ ಸಹ ಭಾಗಿತ್ವದ ಅಂಗವಾಗಿ ಹಮ್ಮಿಕೊಂಡಿ ರುವ ಬೃಹತ್ ವರ್ತುಲ ರಸ್ತೆ ಸ್ವಚ್ಛತಾ ಕಾರ್ಯಕ್ರಮಕ್ಕೆ ದೊಡ್ಡಕೆರೆ ಮೈದಾನ ದಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಈ ಬೃಹತ್ ಅಭಿಯಾನಕ್ಕೆ ಚಾಲನೆ ನೀಡಿ, ಸಾರ್ವಜನಿಕರು ಮತ್ತು ವಿವಿಧ ಸಂಸ್ಥೆಗಳು ಈ ಕಾರ್ಯ ಕ್ರಮದಲ್ಲಿ ಕೈಜೋಡಿಸುವಂತೆ ಮನವಿ ಮಾಡಿ, ಪರಿಸರ ಸಂರಕ್ಷಣೆ ಮತ್ತು ನೈರ್ಮ ಲ್ಯದ ಬಗ್ಗೆ ಜಾಗೃತಿ ಮೂಡಿಸಿದರು. ಪಾಲಿಕೆಯ ಅಧೀಕ್ಷಕ ಅಭಿಯಂತರ ಸಿ.ಎಸ್.ಮಂಜು ಕಾರ್ಯಪಾಲಕ ಅಭಿಯಂತರ ಮಧುಸೂದನ್, ಶ್ರೀನಿ ವಾಸ್, ಅಶ್ವಿನ್, ಮೃತ್ಯುಂಜಯ, ಸಹಾ ಯಕ ಕಾರ್ಯಪಾಲಕ ಅಭಿಯಂತರ ಮೀನಾಕ್ಷಿ, ನಾಗರಾಜೇಗೌಡ, ರವಿ, ವಲಯ ಆಯುಕ್ತೆ ಪ್ರತಿಭಾ ಹಾಗೂ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಭಾಗವಹಿಸಿದರು.

## ಬಸ್ ಡಿಕ್ಕಿ: ಎಸೆಸೆಲ್ಸಿ ವಿದ್ಯಾರ್ಥಿ ಸಾವು

ಹಾಸನ: ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಗಿಸಿ ಬರುತ್ತಿದ್ದ ವಿದ್ಯಾರ್ಥಿಗೆ ರಸ್ತೆ ದಾಟುವ ವೇಳೆ ಕಾರು ಡಿಕ್ಕಿಯಾಗಿ ಸಾವನ್ನಪ್ಪಿದ ಘಟನೆ ಹೊಳೆನರಸೀಪುರ ತಾಲೂಕಿನ ಕಾಮಸಮುದ್ರದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ಚಿರಂತ್ (16) ಮೃತ ವಿದ್ಯಾರ್ಥಿ. ಪರೀಕ್ಷೆ ಮುಗಿಸಿ ಬಸ್ ನಲ್ಲಿ ಊರಿಗೆ ಬಂದ ಬಾಲಕ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಬಾಲ ಕನಿಗೆ ಡಿಕ್ಕಿಯಾಗಿದೆ. ಪರಿಣಾಮ ಬಾಲಕ ಸಾವನ್ನಪ್ಪಿದ್ದಾನೆ. ಅತಿಯಾದ ವೇಗ ಹಾಗೂ ಕಾರು ಚಾಲಕನ ಅಜಾಗರೂಕತೆಯಿಂದ ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ಆರೋಪಿಸಿದ್ದಾರೆ. ಹೊಳೆನರಸೀಪುರ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಬದಲಿ ಮಾರ್ಗದಲ್ಲಿ ಚಲಿಸಲು ಮನವಿ

ಚಾಮರಾಜನಗರ, ಬನ್ನಾರಿ ಅಮ್ಮನ್ ದೇವಸ್ಥಾನ ಕೊಂಡೋತ್ಸವ ಅಂಗವಾಗಿ ಮಾ.30 ರ ಸೋಮವಾರ ಬೆಳಿಗ್ಗೆ 9 ಗಂಟೆಯಿಂದ ಮಾ. 31 ಮಂಗಳವಾರ ರಾತ್ರಿ 9 ಗಂಟೆ ರವರೆಗೆ ಬಣ್ಣಾರಿ, ದಿಂಬ, ಹಾಸನೂರು, ಮಾರ್ಗವಾಗಿ ಮೈಸೂರಿಗೆ ಹೋಗುವ ತರಕಾರಿ ವಾಹನಗಳು ಮತ್ತು ಎಲ್ಲಾ ಬಗೆಯ ವಾಹನಗಳು ಹಾಗೂ ಹಾಸನೂರು, ದಿಂಬ, ಬಣ್ಣಾರಿ ಮಾರ್ಗವಾಗಿ ಕೊಯಮತ್ತೂರು, ಮೇಟುಪಾಳ್ಯ. ಈರೋಡಿಗೆ ಹೋಗುವ ತರಕಾರಿ ವಾಹನಗಳು ಮತ್ತು ಎಲ್ಲಾ ಬಗೆಯ ವಾಹನಗಳು ಬೇರೆ ಮಾರ್ಗವಾಗಿ ಚಲಿಸುವಂತೆ ಈರೋಡು ಜಿಲ್ಲೆ ಪೊಲೀಸ್ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದೆ.

## ಮಾ.31ಕ್ಕೆ ಮಹಿಳಾ ದಿನಾಚರಣೆ

ಮೈಸೂರು: ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ವತಿಯಿಂದ ಮಾ.31 ರಂದು ಬೆಳಗ್ಗೆ 11ಕ್ಕೆ ಮುಡಾ ಎದುರಿನ ರೋಟರಿ ವೆಸ್ಟ್ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯಾಧ್ಯಕ್ಷ ಡಾ. ಎಂ.ಲಿಂಗರಾಜು ತಿಳಿಸಿದರು.

ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಕಮಲಾ ನಟರಾಜ್ ಅಧ್ಯಕ್ಷತೆ ವಹಿಸುವರು. ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಉದ್ಘಾಟಿಸುವರು. ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಇನ್ನಿತರರು ವೇದಿಕೆಯಲ್ಲಿರುವರು. ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರಾದ ಡಾ.ಪ್ರಿಯಾಂಕ ರವಿಕುಮಾರ್, ಮಾಲಿನಿ ಪಾಲಾಕ್ಷ, ಸಬಿತ ಬಾಯಿ, ಸೌಮ್ಯ, ಭವಾನಿ, ರಾಧ, ಬನ್ನಮ್ಮ, ಮಮತ, ಶ್ರೀದೇವಿ, ಕುಪ್ಪಮ್ಮ, ಲಕ್ಷಿ ಇನ್ನಿತರರನ್ನು ಸನ್ಮಾನಿಸಲಾಗುವುದೆಂದರು. ಕಮಲಾ ನಟರಾಜ್, ಸೋಮೇಗೌಡ, ರವಿಪ್ರಸಾದ್, ಮೈತ್ರಿರಾಜ್, ಚರಣ್‌ರಾಜ್ ಹಾಜರಿದ್ದರು.



## 2028ಕ್ಕೆ ನೂತನ ಬಸ್ ನಿಲ್ದಾಣ ಲೋಕಾರ್ಪಣೆ: ಮಹದೇವಪ್ಪ



ಮೈಸೂರು: ಸುಮಾರು 120 ಕೋಟಿ ಕೋಟಿ ವೆಚ್ಚದಲ್ಲಿ ಬನ್ನಿಮಂಟಪದ ಬಳಿ ನಿರ್ಮಾಣ ವಾಗುತ್ತಿರುವ ಬಸ್ ನಿಲ್ದಾಣ ಕಾಮಗಾರಿ ಪ್ರಗತಿ ಹಂತದಲ್ಲಿದ್ದು, 2027ಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ. 2028ರ ಆರಂ ಭಕ್ಕೆ ನೂತನ ಬಸ್ ನಿಲ್ದಾಣ ಲೋಕಾರ್ಪಣೆಗೊ ಳ್ಳಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ.ಮಹ ದೇವಪ್ಪ ತಿಳಿಸಿದರು.

ಬನ್ನಿಮಂಟಪದಲ್ಲಿ ನೂತನ ಕೆಎಸ್ ಆರ್ಟಿಸಿ ಬಸ್ ನಿಲ್ದಾಣ ಕಾಮ ಗಾರಿ ವೀಕ್ಷಣೆ ಮಾಡಿ ಮಾತನಾಡಿದ ಅವರು, ಕಾಮಗಾರಿ ಕೊಟ್ಟಿರುವ ಕಾಲ ವಕಾಶದಲ್ಲಿ ಮುಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ನಗರದ ಒತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ ನೂತನ ನಿಲ್ದಾಣ ನಡೆಯುತ್ತಿದೆ ಎಂದು ಹೇಳಿ ದರು. ಉಪ ಚುನಾವಣೆ ಕುರಿತು ಪ್ರತಿಕ್ರಯಿಸಿ, ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲುತ್ತದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿ ಮತ ಕೊಡು ತ್ತಾರೆ. ಬಿಜೆಪಿಯವರು ಗೆಲ್ಲುತ್ತೇವೆ ಅಂತಾರೆ ಹೇಳಲೇ ಬೇಕಲ್ಲ. ಇನ್ನು ಸೋಲ್ತೇವೆ ಅಂತ ಹೇಳ್ತಾರ.?, ಎರಡೂ ಕ್ಷೇತ್ರಗಳಲ್ಲೂ ಜನ ಕಾಂಗ್ರೆಸ್ ಕೈ ಹಿಡಿ ಯುವ ವಿಶ್ವಾಸ ಇದೆ ಎಂದರು. ಈ ವೇಳೆ ಶಾಸಕ ತನ್ವೀರ್ ಸೇಠ್, ಕರ್ನಾ ಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕೆಎಸ್ ಆರ್ಟಿಸಿ ಡಿಸಿ ಶ್ರೀನಿವಾಸ್, ನಗರಸಾರಿಗೆ ಡಿಸಿ ವೀರೇಶ್ ತ್ಯಾಪಿ, ಭದ್ರತಾ ಮತ್ತು ಜಾಗೃತಾಧಿಕಾರಿ ಎಂ.ಪಿ.ರಘು ಸೇರಿ ಹಲವರು ಭಾಗಿಯಾಗಿದ್ದರು.

## ಶಾಸಕರ ಆಸ್ತಿ ವಿವರಕ್ಕೆ ಲೋಕಾಯುಕ್ತರ ಸೂಚನೆ

ಬೆಂಗಳೂರು: ಪ್ರಸಕ್ತ 2025–26ನೇ ಸಾಲಿಗೆ ಸಂಬಂಧಿಸಿದಂತೆ ಶಾಸಕರು ಮತ್ತು ಅವರ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯನ್ನು



ಜೂ.30ರೊಳಗೆ ಲೋಕಾಯುಕ್ತರಿಗೆ ಸಲ್ಲಿಸಬೇಕು ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರು ಶಾಸಕರಿಗೆ ಮಾಹಿತಿ ನೀಡಿದ್ದಾರೆ. 16ನೇ ವಿಧಾನಸಭೆಗೆ ಆಯ್ಕೆಯಾಗಿರುವ ಶಾಸಕರು ನಿಗದಿತ ನಮೂನೆಯಲ್ಲಿ ಜೂ.30ರೊಳಗೆ ಲೋಕಾಯುಕ್ತಕ್ಕೆ ನೇರವಾಗಿ ಸಲ್ಲಿಸಿ ಮಾಹಿತಿಯನ್ನು ವಿಧಾನಸಭೆ ಸಚಿವಾಲಯಕ್ಕೆ ನೀಡಬೇಕು. ಲೋಕಾಯುಕ್ತ ನಿಬಂಧಕರು ಪತ್ರ ಬರೆದು ಶಾಸಕರು ಮತ್ತು ಅವರ ಕುಟುಂಬ ಸದಸ್ಯರ ಆಸ್ತಿ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಲೋಕಾಯುಕ್ತರಿಗೆ ಸಲ್ಲಿಸಬೇಕಾಗಿದೆ ಎಂದು ತಿಳಿಸಿದ್ದಾರೆ. ವಿಧಾನಪರಿಷತ್ ಸದಸ್ಯರೂ ಕೂಡ ಆಸ್ತಿ ವಿವರಗಳನ್ನು ಜೂ.30ರೊಳಗೆ ಲೋಕಾಯುಕ್ತರಿಗೆ ಸಲ್ಲಿಸಬೇಕಾಗಿದೆ.

**ವಿನಾಯಕ್ ಹೆಗ್ಡೆ**

# ಕೌಶಲ್ಯವನ್ನು ಬೆಳೆಸಿಕೊಳ್ಳಿ, ಕಲಿಕೆಯನ್ನು ಅಪ್ಪಿಕೊಳ್ಳಿ



ಮೈಸೂರು: ನಿಮ್ಮ ಆರಂಭಿಕ ಸಂಬಳ ನಿಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ನಿಮ್ಮ ಕಲಿಯುವ ಸಾಮರ್ಥ್ಯ, ಸಹಯೋಗದ ಮನೋಭಾವ ಮತ್ತು ನಿರಂತರ ಸುಧಾರಣೆಯೇ ನಿಜವಾದ ಯಶಸ್ಸಿನ ದಾರಿ ಎಂದು ಇನ್ಫೋಸಿಸ್ ಮೈಸೂರು ಘಟಕದ ಉಪಾಧ್ಯಕ್ಷ ಹಾಗೂ ಮುಖ್ಯಸ್ಥ ವಿನಾಯಕ್ ಪಿ.ಹೆಗ್ಡೆ ಹೇಳಿದರು.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಶನಿವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ ಪ್ರಾಜೆಕ್ಟ್ ಸ್ಪರ್ಧೆ 'ವೃದ್ಧಿ?2026' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾಲೇಜಿನ ಎಚ್.ಕೆಂಪೇಗೌಡ ಕ್ರೀಡಾ ಸಂಕೀರ್ಣದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳಿಂದ ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗಗಳ ವಿದ್ಯಾರ್ಥಿಗಳು ತಮ್ಮ ನವೀನ ಯೋಜನೆಗಳನ್ನು ಪ್ರದರ್ಶಿಸಿದರು. ಮೂರು ದಶಕಗಳಿಗೂ ಅಧಿಕ ತಮ್ಮ ಎಂಜಿನಿಯರಿಂಗ್ ವೃತ್ತಿಜೀವನದ ಅನುಭವವನ್ನು ಹಂಚಿಕೊಂಡ ಹೆಗ್ಡೆ, ಜೀವನಪರ್ಯಂತ ಕಲಿಕೆ ಮತ್ತು ವೈಫಲ್ಯವನ್ನು ಸಕಾರಾತ್ಮಕವಾಗಿ ಎದುರಿಸುವ ಅಗತ್ಯವನ್ನು ಒತ್ತಿ ಹೇಳಿದರು. "ವೈಫಲ್ಯವು ಅಂತ್ಯವಲ್ಲ; ಅದು ಕಲಿಯಲು ಮತ್ತು ಇನ್ನಷ್ಟು ಬಲಿಷ್ಠರಾಗಲು ಸಿಗುವ ಅವಕಾಶ," ಎಂದು ಅವರು ತಿಳಿಸಿದರು. ಪ್ರತಿಭೆ ವ್ಯಕ್ತಿಯನ್ನು ಗಮನ ಸೆಳೆಯುವಂತೆ ಮಾಡಬಹುದು, ಆದರೆ ತಂಡದ ಕೆಲಸವೇ ಉತ್ತಮ ಫಲಿತಾಂಶಗಳನ್ನು ತರುತ್ತದೆ ಎಂದು ಹೇಳಿದ ಅವರು, ಇಂದಿನ ಪ್ರಾಜೆಕ್ಟ್‌ಗಳಿಗೆ ಸಹಯೋಗ, ಸಮನ್ವಯ ಮತ್ತು ಪರಿಣಾಮಕಾರಿ ಸಂವಹನ ಅತ್ಯಂತ ಅಗತ್ಯವೆಂದು ಅಭಿಪ್ರಾಯಪಟ್ಟರು.

ಇನ್ಫೋಸಿಸ್ ಮೈಸೂರಿನ ಸಹ ಉಪಾಧ್ಯಕ್ಷ ಕೆ. ಎಸ್.ಸುಂದರ್ ಮಾತನಾಡಿ, ಭವಿಷ್ಯದ ವೃತ್ತಿಪರ ಜಗತ್ತು ವೇಗವಾದ ತಾಂತ್ರಿಕ ಬದಲಾವಣೆಗಳು ಮತ್ತು ಕೃತಕ ಬುದ್ಧಿಮತ್ತೆಯಿಂದ ರೂಪುಗೊಳ್ಳುತ್ತಿದೆ ಎಂದರು. ತಾಂತ್ರಿಕ ಜ್ಞಾನ, ವಿಷಯ ಪರಿಣತಿ ಮತ್ತು ಗಟ್ಟಿಯಾದ ಮೂಲಭೂತ ಅರಿವಿನ ಜೊತೆಗೆ ಸಾಮಾಜಿಕ ಕೌಶಲ್ಯಗಳೂ ಸಮಾನವಾಗಿ ಅಗತ್ಯವೆಂದು ಅವರು ಹೇಳಿದರು. "ಎಐ ಉಪಕರಣಗಳು ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಬಹುದು; ಆದರೆ ನಾವೀನ್ಯತೆ ಮಾನವನ ಸೃಜನಶೀಲತೆಯಿಂದಲೇ ಬರುತ್ತದೆ. ವಿದ್ಯಾರ್ಥಿಗಳು ಕುತೂಹಲದಿಂದ ಅವಲೋಕಿಸಿ, ನಿರಂತರವಾಗಿ ಕಲಿಯುತ್ತಾ ಹೊಸ ಆವಿಷ್ಕಾರಗಳತ್ತ ಹೆಜ್ಜೆ ಹಾಕಬೇಕು ಎಂದು ಹೇಳಿದರು. ಈ ಸ್ಪರ್ಧೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ತೆಲಂಗಾಣ ರಾಜ್ಯಗಳಿಂದ ಒಟ್ಟು 53 ತಂಡಗಳು ಭಾಗವಹಿಸಿ ವಿವಿಧ ಎಂಜಿನಿಯರಿಂಗ್ ಕ್ಷೇತ್ರಗಳ ಯೋಜನೆಗಳನ್ನು ಪ್ರದರ್ಶಿಸಿವೆ. ಕಾರ್ಯ ಕ್ರಮದಲ್ಲಿ ವಿ.ವಿ.ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ವಿ.ವಿ.ಸಿ.ಇ ಪ್ರಾಂಶುಪಾಲ ಬಿ.ಸದಾಶಿವ ಗೌಡ, ಉಪ ಪ್ರಾಂಶುಪಾಲೆ ಶೋಭಾ ಶಂಕರ್ ಹಾಗೂ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಗೋಪಾಲರೆಡ್ಡಿ ಉಪಸ್ಥಿತರಿದ್ದರು.

# ಗುರು-ಶಿಷ್ಯ ಪರಂಪರೆ ಯೋಜನೆ ಸದುಪಯೋಗ ಪಡಿಸಿಕೊಳ್ಳಿ




ಚಾಮರಾಜನಗರ:ಗುರು ಶಿಷ್ಯ ಪರಂಪರೆ ಯೋಜನೆಯು ಅಳಿವಿನಂಚಿನಲ್ಲಿರುವ ಕಲೆ, ಸಂಗೀತ, ನೃತ್ಯ ಮತ್ತು ಜಾನಪದ ಪ್ರಕಾರಗಳನ್ನು ಸಂರಕ್ಷಿಸಲು, ಪ್ರತಿಭಾವಂತ ಶಿಷ್ಯರಿಗೆ ನುರಿತ ಗುರುಗಳಿಂದ ತರಬೇತಿ ನೀಡಲು ಸರ್ಕಾರ ನೀಡುವ ಯೋಜನೆಯನ್ನು ಜಿಲ್ಲೆಯ ಕಲಾವಿದರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜು ಹೇಳಿದರು.

ನಗರದ ಡಾ. ರಾಜ್ ಕುಮಾರ್ ರಂಗ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಗುರುಶಿಷ್ಯ ಪರಂಪರೆಯ ಜಾನಪದ ಕಲೆಗಳ ತರಬೇತಿಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು,

ಈ ಯೋಜನೆಯಡಿ, ಗುರುಗಳಿಗೆ ಗೌರವಧನ ಮತ್ತು ಯುವಕಲಾವಿದರಿಗೆ

ಉಚಿತ 6 ತಿಂಗಳ ತರಬೇತಿ ನೀಡಲಾಗುತ್ತದೆ. ಗುರು ಶಿಷ್ಯ ಪರಂಪರೆ ಯೋಜನೆಯು ನಶಿಸಿ ಹೋಗುತ್ತಿರುವ ಕಲೆಗಳನ್ನು ಉಳಿಸುವುದು ಮತ್ತು ಗುರು-ಶಿಷ್ಯ ಪರಂಪರೆಯ ಮೂಲಕ ಜ್ಞಾನವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಸಹಕಾರಿಯಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ತರಬೇತಿ ಪಡೆದಿರುವ ವಿದ್ಯಾರ್ಥಿಗಳು ತಂಡ ವನ್ನು ರಚನೆ ಮಾಡಿಕೊಂಡು ಕಲೆಯನ್ನು ಮುಂದು ವರಿಸಿಕೊಂಡು ಹೋದರೆ ಇಲಾಖೆಯ ವತಿಯಿಂದ ಕಾರ್ಯಕ್ರಮ ಗಳನ್ನು ನೀಡಲಾಗುವುದು ಎಂದರು.

ಗುರು-ಶಿಷ್ಯ ಪರಂಪರೆಯ ಗುರುಗಳಾದ ಮಹೇಶ್ ಜನಪದ ಮಾತನಾಡಿ,ಗುರು ಶಿಷ್ಯ ಪರಂಪರೆ ಯೋಜನೆವು ಸಾಂಪ್ರದಾಯಿಕ ಕಲೆ, ಸಂಗೀತ, ನೃತ್ಯ ಮತ್ತು ಕರಕುಶಲ ಕಲೆಗಳನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ಕನ್ನಡ ಮತ್ತು ಸಂಸ್ಕೃತಿ ಮೂಲಕ ಸರ್ಕಾರಗಳು ಜಾರಿಗೆ ತಂದಿರುವ ಒಂದು ಪ್ರಮುಖ ಕಾರ್ಯಕ್ರಮವಾಗಿದ್ದು ಈ ಯೋಜನೆಯ ಮುಖಾಂತರ ಈ ಭಾಗದ ಮೂಲ ದಾಟಿಯ ಹಾಡುಗಳು ಬೀಸು ಕಂಸಾಳೆ ಜಾನಪದ ನೃತ್ಯ ಕಲೆಯನ್ನು ಕಲಿಸಲು ನನ್ನನ್ನು ಆಯ್ಕೆ ಮಾಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅಭಾರಿಯಾಗಿದ್ದೇನೆ ಎಂದರು. ಅಲ್ಲದೇ ಆರು ತಿಂಗಳಗಳ ಕಾಲ ಮಕ್ಕಳು, ಓದು ಬರಹ ಡ್ಯೂಟಿ ಕಾಲೇಜು ಹೋಂವರ್ಕ್ ಎಷ್ಟೇ ಒತ್ತಡಗಳಿದ್ದರೂ ಪ್ರತಿದಿನ ತರಬೇತಿಗೆ ಬಂದು ನನಗೆ ಗುರು ಸ್ಥಾನವನ್ನು ನೀಡಿ ಉತ್ತಮ ರೀತಿಯಲ್ಲಿ ಗೌರವದಿಂದ ನಡೆದುಕೊಂಡು ತರಬೇತಿಗೆ ಬರುತ್ತಿದ್ದರು ಇಂಥ ಮಕ್ಕಳಿಗೆ ನಾನು ಕಲಿಸಲು ಪುಣ್ಯ ಮಾಡಿದ್ದೆ ನನಗೆ ಇಂಥ ಒಂದು ಒಳ್ಳೆಯ ಅವಕಾಶವನ್ನು ಕೊಟ್ಟಂತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹಾಗೂ ಪ್ರೋತ್ಸಾಹಿಸಿದ ಅಂಬೇಡ್ಕರ್ ವರ್ಗೀಕೃತ ವಸತಿ ನಿಲಯದ ಮೇಲ್ವಿಚಾರಕರು ಹಾಗೂ ತರಬೇತಿ ಪಡೆದಂತ ಎಲ್ಲ ಮಕ್ಕಳು ಎಲ್ಲರಿಗೂ ಧನ್ಯವಾದಗಳು ತಿಳಿಸಿದರು.

ಅಂಬೇಡ್ಕರ್ ವರ್ಗೀಕೃತ ಮಹಿಳಾ ವಸತಿ ನಿಲಯದ ಮೇಲ್ವಿಚಾರಕಿ ಸರಸ್ವತಿ ಮೋಹನ್ ಮಾತನಾಡಿ, ನಿಲಯ ವಿದ್ಯಾರ್ಥಿಗಳಿಗೆ ಗುರು ಶಿಷ್ಯ ಪರಂಪರೆ ಯೋಜನೆಯ ಮೂಲಕ ಸಾಂಪ್ರದಾಯಿಕ ಕಲೆ, ಸಂಗೀತ, ನೃತ್ಯ ತರಬೇತಿ ನೀಡಿರುವುದು ತುಂಬಾ ಸಂತಸವಾಗಿದೆ. ನಿಲಯದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಮೂಲಕ ಕೃತಜ್ಞತೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪರಶಿವಮೂರ್ತಿ ರಾಜಶೇಖರ್ ಮಹೇಶ್ ಕೋಲು. ಕಲೆ ನಟರಾಜುಇತರರು ಹಾಜರಿದ್ದರು. ತರಬೇತಿ ಪಡೆದ ವಿದ್ಯಾರ್ಥಿಗಳು ಬೀಸುಕಂಸಾಳೆ, ಮೂಲಜನಪದ ಗಾಯನ, ಸುಗಮ ಸಂಗೀತ, ಜಾನಪದ ನೃತ್ಯ ಪ್ರದರ್ಶನ ಗಮನ ಸೆಳೆಯಿತು.

## ಒಳ ಮೀಸಲಾತಿಯಿಂದ ಬಲಗೈ ಸಮುದಾಯ ವಿದ್ಯಾರ್ಥಿಗಳಿಗೆ ಅನ್ಯಾಯ

**ಡಾ.ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ಮಹದೇವಯ್ಯ ಹೇಳಿಕೆ**



ಚಾಮರಾಜನಗರ, ಒಳ ಮೀಸಲಾತಿ ಜಾರಿಯಿಂದಾಗಿ ಸಿಇಟಿ, ನೀಟ್ ಮೊರಾರ್ಜಿ, ನವೋದಯ, ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಲಗೈ ಸಮುದಾಯ ವಿದ್ಯಾರ್ಥಿಗಳಿಗೆ ತೊಡಕಾಗುತ್ತಿದೆ ಎಂದು ಡಾ. ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಡಾ.ಮಹದೇವಯ್ಯ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಒಳ ಮೀಸಲಾತಿ ಜಾರಿಯಿಂದಾಗಿ ಎ.ಬಿ.ಸಿ. ವರ್ಗಗಳನ್ನು ಮಾಡಲಾಗಿದ್ದು, ಇದರಲ್ಲಿ ಬಲಗೈ ಸಮುದಾಯದವರು ಬಿ ವರ್ಗವನ್ನು ಕೊಟ್ಟರೆ ಅವರಿಗೆ ಸೀಟ್ ಸಿಗುತ್ತಿಲ್ಲ, ಹಳೇ ಮೀಸಲಾತಿಯನ್ನು ಆಯ್ಕೆ ಮಾಡಿದರೆ ಸಾಮಾನ್ಯ ವರ್ಗಕ್ಕೆ ಆಯ್ಕೆಯಾಗುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ಗೊಂದಲದ ವಾತಾವರಣ ಸೃಷ್ಟಿ ಯಾಗಿದ್ದು, ಇದನ್ನು ನಿವಾರಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು. ಅಲ್ಲದೇ ಪರಿಶಿಷ್ಟ ಜಾತಿಯಲ್ಲಿ ಸ್ಪೃಶ್ಯ ಜಾತಿಯ ಕುಲಂಬೋಗಳು ಸೇರಿಕೊಂಡಿದ್ದು, ಅವರನ್ನು ನಮ್ಮ ಜಾತಿಯಿಂದ ಹೊರಗಿಡಲು ಬಲಗೈ ಹಾಗೂ ಎಡಗೈ ಸಮುದಾಯದ ಎಲ್ಲ ಬಂಧುಗಳು ಒಗ್ಗಟ್ಟಾಗಿ ಹೋರಾಟ ನಡೆಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಕೈ ಜೋಡಿಸಬೇಕು ಎಂದರು.

2024-25 ನೇ ಸಾಲಿನಲ್ಲಿ ನಡೆದ ಸಿಇಟಿ ಪರೀಕ್ಷೆಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ ಹಾಗೂ ಪಶು ವೈದ್ಯಕೀಯ ವಿಭಾಗದಲ್ಲಿ ಬಲಗೈ ಸಮುದಾಯದಿಂದ 687, ಎಡಗೈ ಸಮುದಾಯದಿಂದ 573, ಬಂಜಾರ ಸಮುದಾಯದಿಂದ 1456 ಹಾಗೂ ಭೋವಿ ಜನಾಂಗದಿಂದ 919 ಮಂದಿ ಆಯ್ಕೆಯಾಗಿದ್ದಾರೆ. ಈ ಅಂಕಿ ಅಂಶವನ್ನು ನೋಡಿದರೆ ನಮ್ಮ ಬಲಗೈ ಹಾಗೂ ಎಡಗೈ ಸಮುದಾಯದವರಿಗಿಂತ ಇತರರೇ ಹೆಚ್ಚು ಮಂದಿ ಆಯ್ಕೆಯಾಗಿದ್ದಾರೆ. ಆದ್ದರಿಂದ ಮೊದಲು ಅವರನ್ನು ಪರಿಶಿಷ್ಟ ಜಾತಿಯಿಂದ ಹೊರಗೆ ಹಾಕಲು ನಾವೆಲ್ಲರೂ ಒಂದಾಗಬೇಕು ಎಂದು ಹೇಳಿದರು. ಪತ್ರಿಕಾ ಗೋಷ್ಠಿಯಲ್ಲಿ ಬಳಗದ ಗೌರವಾಧ್ಯಕ್ಷ ಸಂಘಸೇನಾ, ಮುಖಂಡರಾದ ಎಂ ಶಿವನಾಗಣ್ಣ ಕುದೇರು,ರಾಜೇಂದ್ರ ಹೊನ್ನೂರು, ನಟ ಶೇಖರ್ ಮೂರ್ತಿ, ವಿ.ಕೃಷ್ಣರಾಜು, ಮರಿಸ್ವಾಮಿ ಚಾಟೀಪುರ ಹಾಜರಿದ್ದರು.

### ಬೆಂಗಳೂರಿನ ಹೋರಾಟ ಯಶಸ್ವಿ-ಅಭಿನಂದನೆ

**ಮಾ.25 ರಂದು ಬೆಂಗಳೂರಿನಲ್ಲಿ ಒಳಮೀಸಲಾತಿ ವಿರುದ್ಧ ನಡೆದ ಹೋರಾಟಕ್ಕೆ ಚಾಮರಾಜನಗರದಿಂದ ಬೀದರ್‌ವರೆಗೆ ಪ್ರತಿಯೊಂದು ಗ್ರಾಮದಿಂದಲೂ ಬಲಗೈ ಸಮುದಾಯದವರು ಅಪಾರ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಸಂಘಟನೆ ವತಿಯಿಂದ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.**

## ಇಂದಿನಿಂದ ರಂಗಸಂಭ್ರಮ

ಮೈಸೂರು: ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದ ವತಿಯಿಂದ ಮಾ.29, 30, 31ರಂದು ರಂಗಾಯಣ ಆವರಣದ ಕಿರುರಂಗ ಮಂದಿರದಲ್ಲಿ ನಾಡೋಜ ಬೆಳಗಲ್ಲು ವೀರಣ್ಣನವರ 98ನೇ ಹಾಗೂ ಬಿ.ಪುಟ್ಟಸ್ವಾಮಿಯವರ 1340ನೇ ಸವಿನೆನಪಿನ ಪೌರಾಣಿಕ ರಂಗ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಂಗ ತಂಡದ ಮುಖ್ಯಸ್ಥ ಬಿ.ಎಂ.ರಾಮಚಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಾ.29ರ ಸಂಜೆ 5.30ಕ್ಕೆ ಹಿರಿಯ ರಂಗಕರ್ಮಿ ಕಲ್ಪನಾ ನಾಗನಾಥ್ ಉದ್ಘಾಟಿಸುವರು. ಡಾ.ಎಂ.ಡಿ. ಸುದರ್ಶನ್ ವೇದಿಕೆಯಲ್ಲಿರುವರು. ಉಡಿಗಾಲ ಮಹದೇವಪ್ಪಗೆ ರಂಗ ಗೌರವ ಸಲ್ಲಿಸಲಾಗುವುದು. ಬಳಿಕ ರಂಗ ಗೀತಾಂಜಲಿ ತಂಡದಿಂದ ರಂಗ ಗೀತೆಗಳಿವೆ. ಸಂಜೆ 6.45ಕ್ಕೆ ಬಿ. ಪುಟ್ಟಸ್ವಾಮಿ ಅವರ ರಚನೆಯ ಗಧಾಯುದ್ಧ ನಾಟಕ ಪ್ರದರ್ಶನವಿದೆ ಎಂದು ಮಾಹಿತಿ ನೀಡಿದರು.

ಮಾ.30ರ ಸಂಜೆ 5.30ರಿಂದ 6.30ರವರೆಗೆ ರಂಗ ಗೀತೆಗಳಿವೆ. ನಿರ್ಮಲಾ ಮಠಪತಿ, ಬಿ.ಆರ್. ರವೀಶ್, ಎಸ್.ಎನ್. ಶ್ರೀನಿವಾಸ್ ವೇದಿಕೆಯಲ್ಲಿರುವರು, ಕೆ. ರಾಮಮೂರ್ತಿರಾವ್ ಅವರಿಗೆ ರಂಗ ಗೌರವ ಸಲ್ಲಿಸಲಾಗುವುದು. ನಂತರ ಸಂಜೆ 6.30ಕ್ಕೆ ಎಚ್.ಎಸ್. ವೆಂಕಟೇಶಮೂರ್ತಿ ರಚನೆಯ ಮಂಥರಾ ನಾಟಕ ಪ್ರದರ್ಶನವಿದೆ. ಮಾ. 31 ರ ಸಂಜೆ 5.30 ರಿಂದ 6.30 ರವರೆಗೆ ರಂಗಗೀತೆಗಳನ್ನು ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ ಪ್ರಸ್ತುತ ಪಡಿಸಲಿದೆ. ಸಮಾರೋಪ ನುಡಿ ವಿ.ಎನ್.ಮಲ್ಲಿಕಾರ್ಜುನ ಆಡಲಿದ್ದಾರೆ. ಪುಟ್ಟಣ್ಣಯ್ಯ ಉಪಸ್ಥಿತರಿರುವರು, ಮೈಮ್ ರಮೇಶ್ ಅವರಿಗೆ ರಂಗ ಗೌರವ ಸಲ್ಲಿಸಲಾಗುವುದು. ಸಂಜೆ 6.45ಕ್ಕೆ ಕಂದಗಲ್ಲ ಹನುಮಂತರಾಯರ ರಚನೆಯ ರಕ್ತರಾತ್ರಿ ನಾಟಕ ಪ್ರದರ್ಶನವಿದೆ. ಈ ಎಲ್ಲ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶವಿದೆ ಎಂದು ವಿವರಿಸಿದರು. ಧನಲಕ್ಷ್ಮಿ, ಯಶೋಧಾ, ರಾಜು, ಭುವನೇಶ್ವರಿ, ದಿನೇಶ್ ಹಾಜರಿದ್ದರು.



# ರಂಗಭೂಮಿ ತಾಯಿಬೇರು

## ಸಾಹಿತಿ ಮಹದೇವ ಶಂಕನಪುರ ಅಭಿಮತ | ವಿಶ್ವರಂಗಭೂಮಿ ದಿನ

ಚಾಮರಾಜನಗರ, ಭಾರತೀಯ ಸಂಸ್ಕೃತಿ ಬೆಳವಣಿಗೆ ಸೇರಿದಂತೆ ಎಲ್ಲದಕ್ಕೂ ತಾಯಿಬೇರು ರಂಗಭೂಮಿ ಆಗಿದ್ದು, ಜೀವಂತ ಕಲಾ ಪ್ರಕಾರಗಳಲ್ಲಿ ಒಂದಾಗಿದ್ದು, ಜಿಲ್ಲೆಯಲ್ಲಿ ರಂಗಭೂಮಿ ಕಲೆ, ಕಲಾವಿದರು ಇಂದಿಗೂ ಜೀವಂತವಾಗಿದ್ದು, ಅತ್ಯಂತ ಕ್ರಿಯಾಶೀಲವಾಗಿದೆ ಎಂದು ಸಾಹಿತಿ ಮಹದೇವ ಶಂಕನಪುರ ಹೇಳಿದರು.

ನಗರದ ರೋಟರಿ ಭವನದಲ್ಲಿ ಚೇತನ ಕಲಾ ವಾಹಿನಿ, ರೋಟರಿ ಸಂಸ್ಥೆ, ಶ್ರೀಮಹದೇಶ್ವರ ಕಲಾ ಸಂಘ, ಶ್ರೀಬೀರೇಶ್ವರ ಕಲಾ ಸಂಘ, ಶ್ರೀ ಸಿದ್ಧಮಲ್ಲೇಶ್ವರ ಕಲಾ ಸಂಘ ಇವರು ಸಹಯೋಗದಲ್ಲಿ ನಡೆದ ವಿಶ್ವರಂಗಭೂಮಿ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ನಾನು ಇಲ್ಲಿ ಕುಳಿತು ಕಾರ್ಯಕ್ರಮದ ರಂಗಗೀತೆ ಗಾಯನವನ್ನು ಕೇಳಿದಾಗ ನಿಜವಾಗಲೂ ಬಹಳ ಹೆಮ್ಮೆ ಎನ್ನಿಸಿತು. ಖುಷಿ ಅನ್ನಿಸಿತು. ನಿಜಕ್ಕೂ ಕೂಡ ರಂಗಭೂಮಿ ಕಲೆ ಮತ್ತು ಕಲಾವಿದರು ಚಾಮರಾಜನಗರದಲ್ಲಿ ಹೇಗೆ ಸಂವೃದ್ಧಿಯಾಗಿ ತಮ್ಮ ಕಲಾ ಸೇವೆಯನ್ನು ಮಾಡುತ್ತಿದ್ದಾರೆ ಮತ್ತೆ ಅದನ್ನು ಉಳಿಸಿ- ಬೆಳೆಸುವಲ್ಲಿ ಕಾರ್ಯಪ್ರವೃತ್ತರಾಗಿರು ವುದು ನನಗೆ ಹೆಮ್ಮೆ ಎನಿಸಿದೆ ಎಂದರು.

ಮೊಟ್ಟಮೊದಲು 1961 ರಲ್ಲಿ ಅಂತರಾಷ್ಟ್ರೀಯ ರಂಗಭೂಮಿ ಸಂಸ್ಥೆಯು ವಿಶ್ವ ರಂಗಭೂಮಿ ದಿನವನ್ನು ಆಚರಣೆ ಮಾಡುವುದನ್ನು ಚಾಲನೆ ಮಾಡಿತು. ಮಾ. 27 ನ್ನು ವಿಶ್ವ ರಂಗಭೂಮಿ ದಿನವನ್ನಾಗಿ ಆಚರಣೆ ಮಾಡಲಾಗು ತಿದೆ. ನಾವು ಇತಿಹಾಸ ನೋಡಿದರೆ ಸುಮಾರು 25 ಸಾವಿರ ವರ್ಷಗಳ ಇತಿಹಾಸ ರಂಗಭೂಮಿಗೆ ಇದೆ. ಗ್ರೀಕ್ ದೇಶದಲ್ಲಿ ರಂಗಭೂಮಿ ಬಹಳ ಪ್ರಾಚೀನವಾಗಿ ಆರಂಭವಾಯಿತು. ಎಂದು ನಾವು ಚರಿತ್ರೆಯಲ್ಲಿ ನೋಡುತ್ತೇವೆ. ಜಿಲ್ಲೆಯಲ್ಲಿ ರಂಗಭೂಮಿ ಕಲೆಯು, ಕಲಾವಿದರು ಇಂದಿಗೂ ಜೀವಂತವಾಗಿದ್ದು, ಅತ್ಯಂತ ಕ್ರಿಯಾಶೀಲವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡ್ರಾಮಾ ಮಾಸ್ಟರ್ ಆರ್ .ಶಿವಣ್ಣ ಮಂಗಲ, ಕ್ಯಾಷಿಯು ವಿಶ್ವಮಂಡ್ಯ, ತಬಲ ನಿತೀಶ್ ಬಸವಟ್ಟಿ,ಎಂ.ಎನ್.ಮಹದೇವು, ಚೇತನ ಕಲಾವಾಹಿನಿ ಅಧ್ಯಕ್ಷ ಜಿ.ರಾಜಪ್ಪ , ಸುರೇಂದ್ರ, ಗೋವಿಂದರಾಜು, ಶಿವಸ್ವಾಮಿ, ಬೀರೇಗೌಡ, ಸಂಪತ್ ಕುಮಾರ್, ಮಂಜು, ಹುರೇಶ್, ಮಹದೇವಸ್ವಾಮಿ, , ರಾಮಣ್ಣ, ರಾಜೇಶ್, ವೆಂಕಟರಮಣ, ರಾಮಣ್ಣ, ಕೃಷ್ಣ, ನಾಗರಾಜು.. ಮಲ್ಲಿಕಾರ್ಜುನಸ್ವಾಮಿ, ಎಂ.ಎನ್.ರಮೇಶ್, ಇತರರು ಹಾಜರಿದ್ದರು. ಎಲ್ಲ ಕಲಾವಿದರು ರಂಗಗೀತೆ ಸಾದರಪಡಿಸಿದರು.




### ರಂಗಭೂಮಿ ವಿಶಿಷ್ಟವಾದ ಪ್ರಕಾರ, ಕಲೆ

**ಸಿನಿಮಾ ಮಾಧ್ಯಮ ಬಹಳ ಪ್ರಬುದ್ಧವಾಗಿ ಪ್ರಭಾವ ಬೀರುತ್ತಿದೆ. ಹಾಗೆಯೇ ಕಿರುತೆರೆಪ್ರತಿಮನೆಮನೆಯಲ್ಲೂ ಟಿವಿ ಸಿರಿಯಲ್‌ಗಳು ಲಗ್ಗೆಯಿಡುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ನಾವೆಲ್ಲರೂ ಸಕ್ರಿಯವಾಗಿದ್ದೇವೆ. ಈ ಎಲ್ಲದರ ನಡುವೆ ವಿಶಿಷ್ಟವಾದ ರಂಗಭೂಮಿ ವಿಶಿಷ್ಟವಾದ ಪ್ರಕಾರ, ಕಲೆಯು ಯಾವುದೇ ತರಬೇತಿ ಇಲ್ಲದೆ ನಿಜವಾದ ರಂಗಭೂಮಿ, ಕಲೆ, ಕಲಾವಿದರು ನಿಜವಾದಂತಹ ವೇದಿಕೆಗಳು ಮುಖ್ಯವಾಹಿನಿ ಬರಬೇಕಾದವರು. ದೊಡ್ಡದೊಡ್ಡ ಚಲನಚಿತ್ರಗಳಿಗೇನು ರಂಗಭೂಮಿ ಸಾಹಿತ್ಯ, ಸಂಗೀತ ಕಡಿಮೆ ಇಲ್ಲ. ಎಲ್ಲದಕ್ಕೂ ತಾಯಿಬೇರು ರಂಗಭೂಮಿ ಎಂದರು.**

### ರಂಗ ಸನ್ಮಾನ

**ರಂಗಭೂಮಿ ಕಲಾವಿದರಾದ ಡಾ.ರಾಜಶೇಖರಪಂಡಿತ್, ಗೌಡಿಕೆ ಮಹದೇವಸ್ವಾಮಿ, ಆರ್. ಶ್ರೀಕಂಠಸ್ವಾಮಿ, ಸುಬ್ಬೇಗೌಡ, ಟಿ. ಎಸ್.ಶಿವಕುಮಾರ್, ಮಂಡ್ಯ ಪವಿತ್ರಗೌಡ ಅವರನ್ನು ಸನ್ಮಾನಿಸಲಾಯಿತು.**

### ಚಾ.ನಗರ ಜಾನಪದ ತವರೂರು

**ಚೂಡಾ ಅಧ್ಯಕ್ಷ ಮಹಮ್ಮದ್ಅಸ್ಗರ್ ಮಾತನಾಡಿ, ಚಾಮರಾಜನಗರ ಜಾನಪದ ತವರೂರಾಗಿದ್ದು, ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರಂಗಭೂಮಿಯನ್ನು ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತಿದ್ದಾರೆ. ಎಲ್ಲರಿಗೂ ವಿಶ್ವರಂಗಭೂಮಿ ದಿನಾಚರಣೆ ಶುಭಾಯಶ ಕೋರಿದರು.**

## ಶಿಸ್ತು, ನಿಷ್ಠೆ ಮತ್ತು ಜವಾಬ್ದಾರಿಯಿಂದ ಕೆಲಸ ಮಾಡಿದರೆ ಪ್ರಗತಿ ಸಾಧ್ಯ



ಮೈಸೂರು:"ಸರ್ಕಾರಿ ಉದ್ಯೋಗ ಸಿಗುವುದು ಕಷ್ಟಕರವಾದ ಈ ಸಂದರ್ಭದಲ್ಲಿ ನಿಮಗೆ ದೊರೆತಿರುವ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಶಿಸ್ತು, ನಿಷ್ಠೆ ಮತ್ತು ಜವಾಬ್ದಾರಿಯಿಂದ ಕೆಲಸ ಮಾಡಿದರೆ ಮಾತ್ರ ನಿಮ್ಮ ಬದುಕಿನಲ್ಲಿ ಪ್ರಗತಿ ಸಾಧ್ಯ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಹೇಳಿದರು.

ಕಡಕೊಳದ ಕೆಇಬಿಇಎ ತರಬೇತಿ ಕೇಂದ್ರದಲ್ಲಿ ಶುಕ್ರವಾರ ಆಯೋಜಿಸಿದ್ದ 2026ನೇ ಸಾಲಿನ ಕಿರಿಯ ಪವರ್ ಮ್ಯಾನ್ ಹುದ್ದೆಗಳಿಗೆ ನೇಮಕಗೊಂಡ ಅಭ್ಯರ್ಥಿಗಳಿಗಾಗಿ ಒಂದು ದಿನದ ಪರಿಚಯಾತ್ಮಕ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ಕಿರಿಯ ಪವರ್ ಮ್ಯಾನ್ ಗಳಿಗೆ ಅವರುಗಳ ವಿದ್ಯಾರ್ಹತೆಗೆ ಅನುಗುಣವಾಗಿ ತರಬೇತಿ ನೀಡಲಾಗಿದ್ದು, ರೋಸ್ಟರ್ ಆಧಾರದ ಮೇಲೆ ಎಲ್ಲರಿಗೂ ಉದ್ಯೋಗ ಲಭಿಸಿದೆ. ಶಿಸ್ತುಬದ್ಧ ಮತ್ತು ಪ್ರಾಮಾಣಿಕ ರೀತಿಯಲ್ಲಿ ನೇಮಕಾತಿ ನಡೆದಿದ್ದು, ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಅಂಕಗಳಿಗಿಂತ ಶಿಸ್ತು ಮತ್ತು ನಿಷ್ಠೆ ಮುಖ್ಯವಾಗಿದೆ ಎಂದು ಹೇಳಿದರು. "ಇಂದು ತಾಂತ್ರಿಕವಾಗಿ ಸುಸಜ್ಜಿತ ವ್ಯವಸ್ಥೆ ಇಲಾಖೆಯಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು. ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮಾತ್ರ ಉದ್ಯೋಗದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ" ಎಂದು ಸಲಹೆ ನೀಡಿದರು.

"ಸರ್ಕಾರಿ ಉದ್ಯೋಗ ಸಿಗುವುದು ಕಷ್ಟಕರವಾದ ಈ ಸಂದರ್ಭದಲ್ಲಿ ದೊರೆತ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಹಿರಿಯರು ನೀಡುವ ಮಾರ್ಗದರ್ಶನವನ್ನು ಪಾಲಿಸಿ, ಒಗ್ಗಟ್ಟಿನಿಂದ ಕೆಲಸ ಮಾಡಿ ಸಂಸ್ಥೆಯ ಗೌರವವನ್ನು ಹೆಚ್ಚಿಸಬೇಕು" ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಇಂಜಿನಿಯರ್‌ಗಳಾದ ಯೋಗೇಗೌಡ, ಮೋಹನ್ ಶಂಕರ್, ಚನ್ನವೀರಯ್ಯ, ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ವೈ. ಹೇಮಾ, ಎಇಇಗಳಾದ ರಾಮಚಂದ್ರ, ಅನೀಶ್ ಪಾತಕ್ ಸೇರಿ ಇತರರಿದ್ದರು.

## ಮತ್ತೆ ಧರೆಗುರುಳಿದ ಭಾರಿ ಮರ: ತಪ್ಪಿದ ಅನಾಹುತ




ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸುಡುವ ಬಿಸಿಲಲ್ಲ ದಿನಕ್ಕೊಂದು ಮರ ಧರೆಗುರುಳಿತ್ತಾ ಇರುವುದು ಎಲ್ಲರ ಗಮನ ಸೆಳೆದಿದೆ. ಶನಿವಾರವೂ ಸಹ ನಗರದ ಚಾಮರಾಜ ಜೋಡಿ ರಸ್ತೆಯ ಲಕ್ಷ್ಮಿ ಥಿಯೇಟರ್ ಸಮೀಪ ಬೃಹತ್ ಗಾತ್ರದ ಮರ ಇದ್ದಕ್ಕಿದ್ದ ಹಾಗೆ ಉರುಳಿ ಬಿದ್ದಿದೆ.

ಶನಿವಾರ ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ಬೃಹತ್ ಗಾತ್ರದ ಮರವೊಂದು ಉರುಳಿ ಬಿದಿದ್ದು, ಆಟೋವೊಂದು ಜಖಂ ಆಗಿ ಸದ್ಯಕ್ಕೆ ಯಾವುದೇ ಪ್ರಾಣಹಾನಿಯಾಗಿಲ್ಲ. ಆದರೆ, ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿ ಸಂಚಾರ ದಟ್ಟಣೆ ಉಂಟಾಗಿತ್ತು. ವಿಚಾರ ತಿಳಿದ ಕೂಡಲೇ ಸ್ಥಳಕ್ಕೆ ಆಗಮಿಸಿದ ನಗರಪಾಲಿಕೆಯ ಅಭಯ್ ತಂಡ ಮರದ ರೊಂಬೆಗಳನ್ನು ತೆರವು ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ನಿನ್ನೆಯಷ್ಟೇ ರಾಮನುಜ ರಸ್ತೆಯೊಂದರಲ್ಲಿ ತೆಂಗಿನ ಮರವೊಂದು ಎದುರು ಮನೆ ಬಿದ್ದತ್ತು. ಮೊನ್ನೆ ಶ್ರೀ ಜಯಚಾಮರಾಜೇಂದ್ರ ವೃತ್ತದ ಸಮೀಪದಲ್ಲಿ ಬೃಹತ್ ಮರವೊಂದು ಬಿದ್ದತ್ತು. ಮಳೆಗಾಲಕ್ಕೂ ಮುನ್ನವೇ ಬಿಸಿಲಲ್ಲ ಮರಗಳು ಹೀಗೆ ಬೀಳುತ್ತಿರುವುದು ತುಂಬಾ ಆತಂಕವನ್ನು ಉಂಟು ಮಾಡಿವೆ. ಸದ್ಯ ಯಾವುದೇ ಪ್ರಾಣಾ ಹಾನಿಯಂತಹ ಅವಘಡ ಸಂಭವಿಸಲಿಲ್ಲ ಎನ್ನುವುದು ಸಮಾಧಾನಕರ ಸಂಗತಿ.

## ಡಿಕೆಶಿ ಸಿಎಂ ಮಾಡಿ: ಸಿಎಂ ತವರಲ್ಲಿ ಏಕಾಂಗಿ ಹೋರಾಟ

ಮೈಸೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕೆಂದು ಮೈಸೂರಿನ ಭಾಗ್ಯ ಎಂಬ ವ್ಯಕ್ತಿ ಸಿಎಂ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲೇ ಏಕಾಂಗಿಯಾಗಿ ಶಾಂತಿಯ ಸತ್ಯಾಗ್ರಹ ನಡೆಸಿ ಗಮನ ಸೆಳೆದರು.




ನಗರದ ಗಾಂಧಿ ವೃತ್ತದಲ್ಲಿ ಅಹಿಂಸಾತ್ಮಕ ಹೋರಾಟ ನಡೆಸಿದ ಅವರು, ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಗೆ ಸಿಎಂ ಸ್ಥಾನ ಕೊಡಲೇಬೇಕು. ಸಿಎಂ ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ಗೆ ಸಿಎಂ ಸ್ಥಾನ ಬಿಟ್ಟು ಕೊಡುವುದಿಲ್ಲ ಎಂದರೆ 2028ಕ್ಕೆ ಕಾಂಗ್ರೆಸ್ ನಾಶವಾಗುತ್ತದೆ. ಡಿ. ಕೆ.ಶಿವಕುಮಾರ್ ವಿಚಾರದಲ್ಲಿ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಕಾಂಗ್ರೆಸ್ ಪಕ್ಷ ಕಟ್ಟುವಲ್ಲಿ ಡಿಕೆ ಶಿವಕುಮಾರ್ ಪಾತ್ರ ದೊಡ್ಡದು. ಸಿದ್ದರಾಮಯ್ಯ ಅವರೇ ಹೈಕಮಾಂಡ್ ರೀತಿ ವರ್ತನೆ ಮಾಡುತ್ತಿದ್ದಾರೆ. ಪಕ್ಷದ ಸಿದ್ಧಾಂತಕ್ಕೆ ಡಿ.ಕೆ.ಶಿವಕುಮಾರ್ ಬದ್ಧವಾಗಿ ಇದ್ದಾರೆ. ಅಭಿಮಾನಿಗಳು ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಲೇಬೇಕೆಂದು ಪಣ ತೊಟ್ಟಿದ್ದಾರೆ. ಇನ್ನೂ ಎರಡು ವರ್ಷ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಹೇಳಿದರು.

## ಒಂದು ದಿನದ ಕಾರ್ಯಗಾರ

ಗುಂಡ್ಲುಪೇಟೆ,:- ಅಂತರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯಲ್ಲಿ ರೈತರಿಗಾಗಿ ಮಿಶ್ರಬೆಳೆಯಾಗಿ ಅರಿಶಿನ ಮತ್ತು ಈರುಳ್ಳಿ ಬೆಳೆಯ ಬೇಸಾಯ ತರಬೇತಿ ಹಾಗೂ ಮಣ್ಣಿನ ಆರೋಗ್ಯ ಮತ್ತು ಫಲವತ್ತತೆ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು

ಪಟ್ಟಣದ ದರ್ಶನ್ ಪ್ಲಾಜಾ ಕನ್ವೆನ್ಷನ್ ಹಾಲ್ ನಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಾಮರಾಜನಗರ ಕೆವಿಕೆಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಹಾಗೂ ಕೃಷಿ ವಿಜ್ಞಾನಿ ಮೋಹನ ಕುಮಾರ್ ರವರು ರೈತರಿಗೆ ಆಧುನಿಕ ಕೃಷಿ ಪದ್ಧತಿ, ಹೊಸ ತಂತ್ರಜ್ಞಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡು ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆದು ಆದಾಯ ಗಳಿಸುವ ವಿಧಾನಗಳನ್ನು ರೈತರಿಗೆ ತಿಳಿಸಿದರು. ನಂತರ ಮಾತನಾಡಿದ ಅಂತಾರಾಷ್ಟ್ರೀಯ ಮಾನವಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯ ಕೃಷಿ ಸಂಚಾಲಕ ಪ್ರದೀಪ್ ರಾಘವಪುರ ರವರು ಸಂಸ್ಥೆಯ ತಾಲೂಕಿನ ರೈತರ ಪ್ರಗತಿಸಾಧಿಸಲು ಸಂಸ್ಥೆಯು ಕೈಗೊಂಡಿರುವ ಕಾರ್ಯಕ್ರಮಗಳಬಗ್ಗೆ ವಿವರಿಸಿದರು, ಈ ಸಂದರ್ಭದಲ್ಲಿ ಕೃಷಿ ಸಹಾಯಕ ನಿರ್ದೇಶಕ ಶಶಿಧರ್ ರವರು ಭಾಗವಹಿಸಿದ್ದರು





### ಸಿಮ್ಸ್ ನಲ್ಲಿ ಕಾಲೇಜ್ ಅಫ್ ನರ್ಸಿಂಗ್ ಪದವಿ ಪ್ರದಾನ ಸಮಾರಂಭ

## ನರ್ಸ್‌ಗಳ ಕರ್ತವ್ಯ ಪವಿತ್ರವಾದ ಸೇವೆ : ಎಸ್ಪಿ ಮುತ್ತುರಾಜ್

ಚಾಮರಾಜನಗರ, ನರ್ಸ್ ಪದವಿ ಪಡೆದುಕೊಂಡಿರುವ ತಮ್ಮೆಲ್ಲರ ಸೇವೆ ಅತ್ಯಮೂಲ್ಯವಾದದ್ದು, ಜೀವವನ್ನು ಉಳಿಸುವ ಮತ್ತು ಪೋಷಣೆ ಮಾಡುವ ಪವಿತ್ರ ಸೇವೆಯಾಗಿದೆ ಎಂದು ಎಸ್ಪಿ ಮುತ್ತುರಾಜ್ ತಿಳಿಸಿದರು.

ನಗರದ ಯಡಪುರದ ಹೊರ ವಲಯದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಿಮ್ಸ್ ಕಾಲೇಜ್ ಅಫ್ ನಸಿರ್ಂಗ್ ಎರಡನೇ ಬ್ಯಾಚ್ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಸಮಾರಂಭದಲ್ಲಿ ಪದವಿ ಪ್ರಮಾಣ ಮಾಡಿ ಅವರು ಮಾತನಾಡಿದರು. ನೀವೆಲ್ಲರು ಒಳ್ಳೆಯ ನಿರ್ಧಾರವನ್ನು ಮಾಡಿದ್ದೀರಿ, ಬಿಎಸ್ಸಿ ನಸಿರ್ಂಗ್ ಪದವಿ ಪಡೆದುಕೊಂಡಿರುವ ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಲಿ. ಬಿಎಸ್ಸಿ ನಸಿರ್ಂಗ್ ಪದವಿ ಜೊತೆಗೆ ಎಂಎಸ್ಸಿ ನಸಿರ್ಂಗ್ ಪದವಿಯನ್ನು ಪಡೆದುಕೊಳ್ಳುವ ಮೂಲಕ ವೈದ್ಯಕೀಯ ಕ್ಷೇತ್ರದಲ್ಲಿ ಉತ್ತಮ ಸೇವೆ ಹಾಗೂ ಸಾಧನೆ ಮಾಡುವ ಸಂಕಲ್ಪ ನಿಮ್ಮದಾಗಬೇಕು. ಬಿಎಸ್ಸಿ ನಸಿರ್ಂಗ್ ಪದವಿ ಪಡೆದುಕೊಂಡಿರುವ ನೀವು ಸಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉನ್ನತ ಹುದ್ದೆಗಳಿಗೆ ಹೋಗುವ ವಿಫುಲವಾದ ಅವಕಾಶವಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.




ನಸಿರ್ಂಗ್ ವೃತ್ತಿಯು ಬಹಳ ಪವಿತ್ರವಾದ ವೃತ್ತಿಯಾಗಿದ್ದು, ಹಿರಿಯ ನಾಗರೀಕರ ಸೇವೆ ಮತ್ತು ತುರ್ತು ಸಂದರ್ಭದಲ್ಲಿ ಗಾಯಾಳುಗಳಿಗೆ ನೀವು ನೀಡುವ ಸೇವೆಯು ಅವರ ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ. ನರ್ಸಿಂಗ್ ಸೇವೆಯನ್ನು ಶ್ರದ್ಧೆ ಭಕ್ತಿಯಿಂದ ನಿರ್ವಹಣೆ ಮಾಡಿದರೆ ರೋಗಿಯು ಶೇ. 50 ರಷ್ಟು ಗುಣಮುಖರಾಗಲು ಸಾಧ್ಯವಾಗುತ್ತದೆ. ಅನಾರೋಗ್ಯಕೀಡಾದ ತಂದೆ ತಾಯಿಯನ್ನೇ ನೋಡಲು ಮಕ್ಕಳು ಹಿಂದೇಟು ಹಾಕುತ್ತಾರೆ. ಆ ಸಂದರ್ಭದಲ್ಲಿ ನಿಮ್ಮ ಸೇವೆ ಅತ್ಯಮೂಲ್ಯವಾಗಿರುತ್ತದೆ ಎಂದರು.

ಸಿಮ್ಸ್ ಅಸ್ಪತ್ರೆಯ ಡೀನ್ ಮತ್ತು ನಿರ್ದೇಶಕ ಡಾ. ಎಚ್.ಜಿ. ಮಂಜುನಾಥ್ ಮಾತನಾಡಿ, ಎಂಸ್ಸಿ ನಸಿರ್ಂಗ್ ಪದವಿ ಪಡೆದುಕೊಂಡು ವೃತ್ತಿಯನ್ನು ಮಾಡಲು ಹೋಗುತ್ತಿರುವ ನಿಮ್ಮೆಲ್ಲರ ಭವಿಷ್ಯ ಉಜ್ವಲವಾಗಲಿ. ನಸಿರ್ಂಗ್ ಕ್ಷೇತ್ರದಲ್ಲಿ ಬಹಳ ಬೇಡಿಕೆ ಹಾಗೂ ಹೆಚ್ಚಿನ ಅವಕಾಶಗಳು ಇವೆ. ವಿದೇಶಗಳಲ್ಲಿಯು ಸಹ ನರ್ಸಿಂಗ್ ಸೇವೆಗೆ ಬೇಡಿಕೆ ಇದೆ. ಈಗ ವೃತ್ತಿ ಕೌಶಲ್ಯಪಡೆದು ಅಸ್ಪತ್ರೆಯಲ್ಲಿ ಸೇವೆ ಮಾಡುವಾಗ ತಾವು ಅವರನ್ನು ಉಪಚಾರಿಸುವ ರೀತಿ ಬಹಳ ಮುಖ್ಯವಾಗಿರುತ್ತದೆ. ನಗು ಮುಖದಿಂದ ರೋಗಿಗಳನ್ನು ಮುಟ್ಟಿ ಮಾತನಾಡಿಸಿದರೆ ಅತ್ಮಸ್ಥೈರ್ಯ ಹೆಚ್ಚಾಗಿ ಶೇ. 50 ಕಾಯಿಲೆ ಗುಣಮುಖರಾಗುವ ಸಾಧ್ಯತೆಗಳೂ ಹೆಚ್ಚಾಗಿರುತ್ತವೆ. ಇಂಥ ಸಂದರ್ಭದಲ್ಲಿ ತಾವುಗಳು ಸಹನೆ, ಪ್ರೀತಿ ವಿಶ್ವಾಸ, ಕರುಣೆಯನ್ನು ಹೊಂದಿ, ಸೇವೆ ಮಾಡಿದಾಗ ಅದರ ಪ್ರತಿಫಲ ದೊರೆಯಲಿದೆ ಎಂದರು. ಬೆಂಗಳೂರಿನ ಸರ್ಕಾರಿ ಶುಶ್ರೂಷ ಶಾಲೆಯ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ, ಸಿಮ್ಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಅಜಯ್, ಶೂಶ್ರೂಷ ಅಧೀಕ್ಷರಾದ ಜಮುನಾ, ಪ್ರೊ. ರೇವಣ್ಣ, ಉಪಸ್ಥಿತರಿದ್ದರು. ಬಿಎಸ್ಸಿ ನಸಿರ್ಂಗ್ ಪದವಿ ಪಡೆದುಕೊಂಡಿರುವ 94 ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲಾಯಿತು.

# ಮಹಿಳೆಯರು ಆರೋಗ್ಯದ ಕಡೆ ನಿಗಾ ವಹಿಸಿ

**ಡಾ. ಶ್ವೇತಾ ಶಶಿಧರ್ ಹೇಳಿಕೆ | ಬಿಜೆಪಿ ಮಹಿಳಾ ಮೋರ್ಚಾದಿಂದ ವಿಶ್ವ ಮಹಿಳಾ ದಿನಾಚರಣೆ**



ಚಾಮರಾಜನಗರ, ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಮಹಿಳೆಯರ ಪಾತ್ರ ಬಹಳ ಇದೆ ಎಂದು ಶ್ರೀ ಬಸವರಾಜೇಂದ್ರ ಅಸ್ಪತ್ರೆಯ ಸ್ತ್ರೀ ರೋಗ ತಜ್ಞರಾದ ಡಾ. ಶ್ವೇತಾ ಶಶಿಧರ್ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದಿಂದ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದರು, ಮಹಿಳೆಯರಿಗೆ ಮೀಸಲಾತಿ ಜಾರಿ ಹಾಗೂ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾವಂತರಾಗುತ್ತಿದ್ದಾರೆ. ಇದರ ಪರಿಣಾಮ ಅವರಿಗೆ ಸಾಮಾಜಿಕ ಜವಾಬ್ದಾರಿ ಹೆಚ್ಚಾಗುತ್ತದೆ. ಮನೆ ಹಾಗೂ ಹೊರಗಡೆಯು ಮಹಿಳೆ ಹೆಚ್ಚು ದುಡಿಯುತ್ತಿರುವ ಕಾರಣದಿಂದ ತಮ್ಮ ವೈಯಕ್ತಿಕ ಆರೋಗ್ಯ ಕಡೆ ಗಮನ ನೀಡಲು ಸಾಧ್ಯವಾಗುತ್ತಿಲ್ಲ. ಇದನ್ನು ನಿರ್ಲಕ್ಷ್ಯ ಮಾಡದೇ ಪ್ರತಿಯೊಬ್ಬರು ತಮ್ಮ ಆರೋಗ್ಯ ಕಡೆ ನಿಗಾ ವಹಿಸಬೇಕು. ಸಣ್ಣ ಪುಟ್ಟ ಸಮಸ್ಯೆಗಳು ಕಾಣ ಸಿಕೊಂಡ ತಕ್ಷಣ ವೈದ್ಯರ ಸಲಹೆ ಮಾರ್ಗದರ್ಶನವನ್ನು ಪಡೆದುಕೊಳ್ಳುವುದು ಒಳಿತು ಎಂದರು.

ವಿಶೇಷವಾಗಿ ಮಹಿಳೆಯರು 40 ವರ್ಷ ದಾಟುತ್ತಿದ್ದಂತೆ ಅನೇಕ ಸಮಸ್ಯೆಗಳು ಬರುತ್ತಿವೆ. ಪ್ರಮುಖವಾಗಿ ಗರ್ಭಕೋಶ ಕ್ಯಾನ್ಸರ್ನಿಂದ ಬಳಲುವರು ಸಂಖ್ಯೆ ಹೆಚ್ಚಿದೆ. ಹೀಗಾಗಿ ತಾವೆಲ್ಲರು ಆಗಿದ್ದಾಂಗೆ ಪರೀಕ್ಷೆ ಮಾಡಿಸಿಕೊಳ್ಳುವ ಮೂಲಕ ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು. ಕೇಂದ್ರ ಸರ್ಕಾರ ಇಂಥ ಕ್ಯಾನ್ಸರ್ ತಡೆಯುವ ಸಲುವಾಗಿ ಉಚಿತವಾಗಿ ಹೆಣ್ಣು ಮಕ್ಕಳಿಗೆ ಲಸಿಕೆ ಹಾಕುತ್ತಿದೆ. ಇದನ್ನು ತಪ್ಪದೇ ಮಕ್ಕಳಿಗೆ ಹಾಕಿಸಿ, ಇದರಿಂದ ಕ್ಯಾನ್ಸರ್ನಂತರ ವೈರಸ್‌ಗಳು ಬೆಳೆಯುವುದನ್ನು ತಡೆಯಲು ಸಾಧ್ಯವಿದೆ. ವೈದ್ಯಯಾಗಿ ನಾನು ಸಹ ನಮ್ಮ ಮಕ್ಕಳಿಗೆ ಈ ಲಸಿಕೆಯನ್ನು ಹಾಕಿಸಿದ್ದೇವೆ. ಅಪಪ್ರಚಾರಕ್ಕೆ ಕಿವಿಗೊಡಬೇಡಿ ಎಂದರು.

ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಬಂದ ನಂತರ ಬಹಳಷ್ಟು ಗಮನಾರ್ಹವಾದ ಬದಲಾವಣೆಗಳನ್ನು ಮಾಡಿದೆ. ಮಹಿಳೆಯರ ಸ್ವಾವಲಂಬಿನೆ ಬದುಕಿಗಾಗಿ ಅನೇಕ ಯೋಜನೆಗಳು ಜಾರಿಯಲ್ಲಿವೆ. ಜೊತೆಗೆ ಮಹಿಳೆಯರ ಸಬಲೀಕರಕ್ಕಾಗಿ ಕೌಶಲ್ಯ ತರಬೇತಿ ನೀಡಿ, ಸ್ವಂತ ಉದ್ಯೋಗವನ್ನು ಹೊಂದಲು ಸಹಕಾರಿಯಾಗುತ್ತಿದೆ ಎಂದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಹಾಗೂ ಮಹಿಳಾ ಮೋರ್ಚಾದ ಪ್ರಭಾರಿ ರೂಪೇಶ್ ಮಾತನಾಡಿ, ಕೇಂದ್ರ ಸರ್ಕಾರ ಜನಪರ ಯೋಜನೆಗಳನ್ನು ತಿಳಿಸುವ ಜೊತೆಗೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಶೇ. 33 ರಷ್ಟು ಮೀಸಲಾತಿ ಕಲ್ಪಿಸಿ, ಮುಖ್ಯವಾಹಿನಿ ತರಲು ಶ್ರಮಿಸುತ್ತಿದ್ದಾರೆ ಎಂದರು. ಮಹಿಳಾ ಮೋರ್ಚಾ ಅಧ್ಯಕ್ಷೆ ಮಲೆಯುರು ಕಮಲಮ್ಮ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಎಂ. ಶೈಲಾ, ಮಮತಾ, ಜಿಲ್ಲಾ ಉಪಾಧ್ಯಕ್ಷರಾದ ಪದ್ಮ ಉತ್ತುವಳ್ಳಿ, ಜಯಶೀಲಾರಾಜಶೇಖರ್, ಕಾಗಲವಾಡಿ ಜ್ಯೋತಿ, ಮಂಡಲದ ಅಧ್ಯಕ್ಷರಾದ ಚಾ.ನಗರ ಉಷಾ, ಕೊಳ್ಳೇಗಾಲ ಕಲಾವತಿ, ಯಳಂದೂರು ಸುಧಾ, ಮಹದೇಶ್ವರ ಮಂಡಲದ ಮೀನಾ, ಉಪಾಧ್ಯಕ್ಷೆ ಕುಮಚಹಳ್ಳಿ ಪಾರ್ವತಮ್ಮ, ಅಂಬಿಕಾ, ಮೊದಲಾದವರು ಹಾಜರಿದ್ದರು.

# ಶೇ.60 ಕನ್ನಡ ಬಳಕೆಗೆ ಆಗ್ರಹ



ಎಚ್.ಡಿ.ಕೋಟೆ: ಪಟ್ಟಣದಲ್ಲಿರುವ ಇಂಡಿಯನ್ ಹೋಟೆಲ್ ಹಾಗೂ ಹ್ಯಾಂಡ್ ಪೋಸ್ಟ್ ಸಮೀಪವಿರುವ ಕೂಲ್ ಲ್ಯಾಂಡ್ ಹೋಟೆಲ್ ಗಳ ನಾಮಫಲಕಗಳಲ್ಲಿ ಶೇ.60 ಕನ್ನಡ ಬಳಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ತಾಲೂಕು ಅಧ್ಯಕ್ಷ ಕ್ರಾಂತಿಕುಮಾರ್ ನೇತೃತ್ವದಲ್ಲಿ ಹೋಟೆಲ್ ಮಾಲೀಕರಿಗೆ ಆಗ್ರಹ ಮಾಡಲಾಯಿತು.

ನಾಮಫಲಕಗಳಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಿ ಕೊಂಡು, ಹದಿನೈದು ದಿನಗಳ ಒಳಗೆ ಕನ್ನಡದಲ್ಲಿ ನಾಮಫಲಕ ಅಳವಡಿಸದಿದ್ದರೆ, ಪ್ರಸ್ತುತ ಅಳವಡಿಸಿರುವ ನಾಮಫಲಕಗಳನ್ನು ಕಿತ್ತೆಸೆದು, ಹೋಟೆಲ್ ಗಳ ಮುಂದೆ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಕ್ರಾಂತಿಕುಮಾರ್ ಎಚ್ಚರಿಸಿದರು.

ತಾ.ಗೌರವ ಅಧ್ಯಕ್ಷ ಸೋಮಣ್ಣ, ತಾ. ಉಪಾಧ್ಯಕ್ಷರಾದ ಶಿವು, ಚನ್ನ (ಸೋಮಣ್ಣ ), ಟೌನ್ ಅಧ್ಯಕ್ಷ ಮಹೇಶ್, ಟೌನ್ ಉಪಾಧ್ಯಕ್ಷ ಚೆಲುವರಾಜು, ತಾ.ಸಹ ಕಾರ್ಯದರ್ಶಿ ರಾಜೀವ್, ತಾ.ಕಾರ್ಮಿಕ ಘಟಕ ಅಧ್ಯಕ್ಷ ಸ್ವಾಮಿ ಕುಮಾರ್, ಸಂಚಾಲಕರಾದ ರಘು, ಮೂರ್ತಿ, ಜೆ.ಜಿ ಕಾಲೋನಿ ರವಿ, ಪಧಾದಿಕಾರಿಗಳಾದ ಪ್ರಜ್ವಲ್, ರುದ್ರಕುಮಾರ್, ಮಂಜು, ಶಬೀರ್, ಜಗ, ವೆಂಕಟೇಶ್, ಪ್ರಸನ್ನ, ಪ್ರಸಾದ್, ಗೋಪಲ್, ಶಿವು, ಟೈಲರ್ ನಾಗರಾಜು, ನಟ, ತಾ.ಮುಖಂಡ ಕೃಷ್ಣ ಇದ್ದಾರೆ.

# ಬೂದಿತಿಟ್ಟುಕ್ರಾಸ್ ಡೈರಿಯ ನೂತನ ಅಧ್ಯಕ ಉಪಾಧ್ಯಕ್ಷರ ಅವಿರೋಧ ಆಯ್ಕೆ



ಚಾಮರಾಜನಗರ, ತಾಲೂಕಿನ ಬೂದಿತಿಟ್ಟು ಕ್ರಾಸ್ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಸವಣ್ಣ, ಉಪಾಧ್ಯಕ್ಷರಾಗಿ ಮಹದೇವಪ್ರಸಾದ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಸವಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಪ್ರಸಾದ್ ನಾಮಪತ್ರ ಸಲ್ಲಿಸಿದರು ಈ ಎರಡು ಸ್ಥಾನಗಳಿಗೆ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಚುನಾವಣಾಧಿಕಾರಿ ನಾಗೇಶ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಘೋಷಿಸಿದರು. ಸಭೆಯಲ್ಲಿ ನಿರ್ದೇಶಕರಾದ ಶಿವಶಂಕರ, ಮಲ್ಲು, ಸುಬ್ಬಣ್ಣ, ಚಂದ್ರಮ್ಮ, ಶಾರದಮ್ಮ, ಮಹದೇವಸ್ವಾಮಿ, ಬಸವರಾಜು, ಮಹದೇವಸ್ವಾಮಿ, ಎನ್. ಕುಮಾರ್ ,ಶಿವಣ್ಣ, ಸಿಇಓ ಎನ್. ಚಂದ್ರಶೇಖರಸ್ವಾಮಿ, ಎನ್. ಚಿನ್ನಸ್ವಾಮಿ, ಆರ್.ಎಸ್.ಪ್ರತಾಪ್, ಬಿ.ಮಹೇಶ, ಪ್ರಭುಸ್ವಾಮಿ, ಮಂಜುನಾಥ್ ಭಾಗವಹಿಸಿದ್ದರು.

# ಶ್ರೀರಾಮ ಮಹಾರಥೋತ್ಸವ ಯಶಸ್ವಿ, ಸಾವಿರಾರು ಭಕ್ತರು ಭಾಗಿ

ರಾಮನಗರ: ಜಿಲ್ಲೆಯ ಪ್ರಸಿದ್ಧ ಶ್ರೀ ರಾಮದೇವರ ಮಹಾರಥೋತ್ಸವ ಅತ್ಯಂತ ವಿಜೃಂಬಣೆ ಮತ್ತು ಭಕ್ತಿ ಭಾವದೊಂದಿಗೆ ಯಶಸ್ವಿಯಾಗಿ ನೆರವೇರಿತು.

ನಗರದ ಅಗ್ರಹಾರದಲ್ಲಿರುವ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಾಲಯದ ಬಳಿಯಿಂದ ಶನಿವಾರ ಬೆಳಗ್ಗೆ 11ರ ವೇಳೆಗೆ ರಥೋತ್ಸವ ಆರಂಭವಾಯಿತು. ರಥೋತ್ಸವ ಚಾಲನೆಗೂ ಮುನ್ನ ಶ್ರೀರಾಮ ದೇವಾಲಯದಲ್ಲಿ ಪ್ರಾತಃ ಕಾಲ ಪೂಜೆ, ನವಗ್ರಹ ಪೂಜೆ, ಯಾತ್ರಾದಾನ ಮುಂತಾದ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು. ಸೀತಾ, ಲಕ್ಷಣ, ಹನುಮ ಸಮೇತ ಶ್ರೀರಾಮ ದೇವರ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ರಥದಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ತದನಂತರ ಅಗ್ರಹಾರ ಮುಖ್ಯ ರಸ್ತೆಯ ಮೂಲಕ ರಥೋತ್ಸವ ಕಾಮಣ್ಣನ ಗುಡಿ ವೃತ್ತಕ್ಕೆ ಬಂದಾಗ, ನೆರೆದಿದ್ದ ನೂರಾರು ಭಕ್ತರು ತಮ್ಮ ಕುಟುಂಬ ಸಮೇತರಾಗಿ ರಥದಲ್ಲಿ ವಿರಾಜಮಾನರಾಗಿದ್ದ ಶ್ರೀ ರಾಮ, ಸೀತಾ, ಲಕ್ಷ ?ಮಣರಿಗೆ ಪೂಜೆ ನೆರವೇರಿಸಿದರು. ಭಕ್ತರಿಂದ ಪೂಜೆ ಸ್ವೀಕರಿಸಿದ ನಂತರ ಸಂಜೆ ವೇಳೆಗೆ ರಥೋತ್ಸವ ಪುನಃ ಆರಂಭವಾಯಿತು. 40ಕ್ಕೂ ಹೆಚ್ಚು ಅಡಿಗಳ ಎತ್ತರದ ರಥ ಎಂ.ಜಿ.ರಸ್ತೆ, ಮುಖ್ಯ ರಸ್ತೆಗಳಲ್ಲಿ ಸಂಚರಿಸಿದ ರಥ, ಶ್ರೀ ರಾಮ ದೇವಾಲಯದ ಬಳಿ ಸಮಾಪ್ತಿಯಾಯಿತು.



## ಗಣ್ಯರ ಭೇಟಿ

ಶ್ರೀ ರಾಮ ರಥೋತ್ಸವದ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್, ರಾಮನಗರ ಶಾಸಕ ಇಕ್ಬಾಲ್ ಹುಸೇನ್, ರಾಜ್ಯ ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ತಾಲೂಕು ತಹಸೀಲ್ದಾರ್ ತೇಜಸ್ವಿನಿ, ಮುಜರಾಯಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮುಂತಾದವರು ದೇವಾಲಯಕ್ಕೆ ಭೇಟಿ ಕೊಟ್ಟು, ರಥೋತ್ಸವಕ್ಕೆ ಸಾಕ್ಷಿಯಾದರು. ಶ್ರೀ ರಾಮ ರಥೋತ್ಸವದ ಹಿನ್ನೆಲೆಯಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್, ರಾಮನಗರ ಶಾಸಕ ಇಕ್ಬಾಲ್ ಹುಸೇನ್, ರಾಜ್ಯ ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ತಾಲೂಕು ತಹಸೀಲ್ದಾರ್ ತೇಜಸ್ವಿನಿ, ಮುಜರಾಯಿ ಇಲಾಖೆಯ ಅಧಿಕಾರಿಗಳು, ಪೌರಾಯುಕ್ತ ಡಾ.ಜಯಣ್ಣಟ ಸಿಬ್ಬಂದಿ ಮುಂತಾದವರು ದೇವಾಲಯಕ್ಕೆ ಭೇಟಿ ಕೊಟ್ಟು, ರಥೋತ್ಸವಕ್ಕೆ ಸಾಕ್ಷಿಯಾದರು. ಈ ವೇಳೆ ಶ್ರೀ ಸೀತಾ ರಾಮ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಮನಮೋಹನ್ ಪ್ರಸಾದ್, ಉಪಾಧ್ಯಕ್ಷರುಗಳಾದ ಲಕ್ಷ್ಮಣ್, ಆರ್. ಜಿ.ಚಂದ್ರಶೇಖರ, ಪ್ರಧಾನ ಕಾರ್ಯದರ್ಶಿ ಕೆ.ವಿ. ಉಮೇಶ್, ಕಾರ್ಯದರ್ಶಿ ಆರ್.ಜೆ.ಕುಮಾರ ಸ್ವಾಮಿ, ನಿರ್ದೇಶಕರುಗಳಾದ ಪಿ.ಶಿವಾನಂದ, ಗೂಳಿ ಕುಮಾರ್, ಸೋಮಶೇಖರ್ (ಮಣಿ), ಮಂಜು (ಬಿಜೆಪಿ), ಪ್ರಮುಖರಾದ ಆರ್.ವಿ.ಸುರೇಶ್. ಚಂದನ್ ಮೊಹರೆ, ಆಶಿಶ್ ಬೋರ, ಮಹೇಶ್.ಸಿ.ಎಸ್, ಆರ್.ಆರ್.ಪುರುಷೋತ್ತಮ, ರಾಜು.ಕೆ, ಸ್ವರ್ಣೇಶ್, ರಾಹುಲ್ ರೆಡ್ಡಿ, ಸೇರಿದಂತೆ ಟ್ರಸ್ಟಿಗಳು, ಶ್ರೀ ರಾಮ ದೇವಾಲಯದ ಪಾರುಪತ್ತೆದಾರ ಮಧುರೈ ವೀರನ್, ರಾಜಭೋವಿ ಮತಸ್ಥರು, ಮರಗೆಲಸ ಸಂಘದ ಪದಾಧಿಕಾರಿಗಳು ಹಾಜರಿದ್ದರು. ಮಹಾರಥೋತ್ಸವದ ಅಂಗವಾಗಿ ದೇವಾಯದಲ್ಲಿ ನಡೆಯುತ್ತಿರುವ ಧಾರ್ಮಿಕ ಕೈಂಕರ್ಯಗಳನ್ನು ಪ್ರಧಾನ ಆಗಮಿಕರುಗಳಾದ ಎ.ನರಸಿಂಹಭಟ್ಟರು ಮತ್ತು ತಂಡ ನೆರವೇರಿಸಿತು.

## ಅರವಟ್ಟಿಗೆಗಳ ಮಹಾಪೂರ

**ಶ್ರೀರಾಮ ಮಹಾರಥೋತ್ಸವ ರಾಮನಗರ ಜಿಲ್ಲೆ, ಬೆಂಗಳೂರು ನಗರ, ಮಂಡ್ಯ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಪ್ರಸಿದ್ಧಿ ಪಡೆದಿದೆ. ಶ್ರೀರಾಮ ರಥೋತ್ಸವಕ್ಕೆ ರಾಜ್ಯದ ವಿವಿಧೆಡೆಗಳಿಂದ ಭಕ್ತರು ಆಗಮಿಸಿ ಶ್ರೀರಾಮದೇವರ ದರ್ಶನ ಪಡೆಯುವರು. ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸುವ ಭಕ್ತರ ದಾಹ ಮತ್ತು ಹಸಿವು ನೀಗಿಸಲು ಎಂ.ಜಿ.ರಸ್ತೆ, ಮುಖ್ಯ ರಸ್ತೆ, ಹಳೇ ಬಸ್ ನಿಲ್ದಾಣ, ಛತ್ರದ ಬೀದಿ ಹೀಗೆ ನಗರದ ವಿವಿಧೆಡೆ ಸಂಘ-ಸಂಸ್ಥೆಗಳು ಹಾಗೂ ದಾನಿಗಳು ವೈಯಕ್ತಿಕವಾಗಿ ಅರವಟ್ಟಿಗೆಗಳನ್ನು ಏರ್ಪಡಿಸಿದ್ದರು. ಕುಡಿಯುವ ನೀರು, ನೀರು ಮಜ್ಜಿಗೆ, ಪಾನಕ, ಕೋಸಂಬರಿ, ಪಲಾವ್, ಚಿತ್ರಾನ್ನ, ವಾಂಗಿಬಾತ್ ಹೀಗೆ ಬಗೆಬಗೆಯ ರೈಸ್ ಬಾತ್‌ಗಳನ್ನು ಮತ್ತು ಕೇಸರಿ ಬಾತ್ ವಿತರಿಸಲಾಯಿತು. ಶ್ರೀರಾಮ ರಥೋತ್ಸವದ ವೇಳೆ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಪೊಲೀಸರು ಬಂದೋಬಸ್ತ್ ಏರ್ಪಡಿಸಿದ್ದರು.**





# ಇಂದು ನಿರ್ಗಮನ ಪಥಸಂಚಲನ ಕಾರ್ಯಕ್ರಮ: ಚನ್ನಬಸವಣ್ಣ



ಮೈಸೂರು: ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ 46ನೇ ತಂಡದ ಪೊಲೀಸ್ ಉಪ ನಿರೀಕ್ಷಕ(ಸಿವಿಲ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮವನ್ನು ಮಾ.29ರಂದು ಬೆಳಗ್ಗೆ 8 ಗಂಟೆಗೆ ಅಕಾಡೆಮಿಯ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪನಿರ್ದೇಶಕ ಚನ್ನಬಸವಣ್ಣ ತಿಳಿಸಿದರು.


ಕರ್ನಾಟಕ ಪೊಲೀಸ್ ಅಕಾಡೆಮಿಯ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಲಿದ್ದಾರೆ. ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕ ಮತ್ತು ಪೊಲೀಸ್ ಮಹಾ ನಿರೀಕ್ಷಕ ಡಾ.ಎಂ.ಎ.ಸಲೀಂ, ತರಬೇತಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ದೇವಜ್ಯೋತಿ ರೇ, ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ಪೋಲೀಸ್ ಮಹಾನಿರೀಕ್ಷಕ ಮತ್ತು ನಿರ್ದೇಶಕ ಎನ್.ವಿಷ್ಣುವರ್ಧನ ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿಯ ಡಿಎಸ್ ಪಿ ರೇಣುಕಾರಾಧ್ಯ, ಆರ್.ಕುಮಾರ್, ಸಂದೇಶ್ ಕುಮಾರ್ ಹಾಗೂ ವೆಂಕಟೇಶ್ ಉಪಸ್ಥಿತರಿದ್ದರು.

# ಶ್ರೀರಾಮನ ಆದರ್ಶಗಳು ಸಮಾಜಕ್ಕೆ ದಾರಿ ತೋರಲಿ – ಸಂಸದ ಡಾ. ಸಿ.ಎನ್. ಮಂಜುನಾಥ್

ರಾಮನಗರ: ಧರ್ಮ, ಸತ್ಯ ಮತ್ತು ನೀತಿಯ ಪ್ರತೀಕವಾಗಿರುವ ಶ್ರೀರಾಮನು ಎಲ್ಲರ ಜೀವನದಲ್ಲಿ ಶಾಂತಿ, ಸಮೃದ್ಧಿ ಮತ್ತು ಸದ್ಗುಣಗಳನ್ನು ತುಂಬಲಿ ಎಂದು ಪ್ರಾರ್ಥಿಸಿರುವುದಾಗಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ತಿಳಿಸಿದರು.

ಶ್ರೀ ರಾಮ ದೇವರ ಮಹಾರಥೋತ್ಸವದ ಅಂಗವಾಗಿ ರಾಮನಗರಕ್ಕೆ ಭೇಟಿ ನೀಡಿದ್ದ ಅವರು ಛತ್ರದ ಬೀದಿಯಲ್ಲಿರುವ ಶ್ರೀರಾಮ ದೇವರ ದರ್ಶನ ಪಡೆದರು. ನಂತರ ರಥೋತ್ಸವ ವೀಕ್ಷಿಸಿದ ವೇಳೆ ಅವರು ಮಾತನಾಡಿದರು. ಶ್ರೀ ರಾಮನ ಆದರ್ಶಗಳು ನಮ್ಮ ಜೀವನಕ್ಕೆ ದಾರಿ ತೋರಿಸುವ ಬೆಳಕಾಗಿವೆ. ಸಮಾಜದಲ್ಲಿ ಏಕತೆ, ಶಾಂತಿ ಮತ್ತು ಸಹಕಾರ ಹೆಚ್ಚಾ



ಗಲಿ. ಸರ್ವರಿಗೂ ಆರೋಗ್ಯ, ಐಶ್ವರ್ಯ ಮತ್ತು ಒಳಿತು ದೊರಕಲಿ ಎಂದು ಆಶಯ ವ್ಯಕ್ತಪಡಿಸಿದರು. ರಾಮ ನಗರ ಜೆಡಿಎಸ್ ಅಧ್ಯಕ್ಷರಾದ ಸಬ್ಬೆಗೆರೆ ಶಿವಲಿಂಗಪ್ಪ , ಬಿಜೆಪಿ ಮುಖಂಡರಾದ ಪಿ. ಶಿವಾನಂದ, ಜಿ.ವಿ.ಪದ್ಮನಾಭ, ಶ್ರೀ ರಾಮ ಸೇವಾ ಟ್ರಸ್ಟ್ ನ ಪದಾಧಿಕಾರಿಗಳು ಮತ್ತು ಗಣ್ಯರು ಹಾಜರಿದ್ದರು.

# ಉತ್ತಂಗೆರೆಹುಂಡಿಯಲ್ಲಿ ಕೇಬಲ್ ಕಳ್ಳತನ

ಗುಂಡ್ಲುಪೇಟೆ: ತಾಲೂಕಿನ ಉತ್ತಂಗೆರೆ ಹುಂಡಿ ಗ್ರಾಮದ ಜಮೀನಿನಲ್ಲಿ ಪಂಪ್ ಸೆಟ್ ನಲ್ಲಿ ಅಳವಡಿಕೆ ಮಾಡಿದ್ದ ಸುಮಾರು 250 ಮೀಟರ್ ಕೇಬಲ್ ವೈರ್, ಸೋಲಾರ್ ಬ್ಯಾಟರಿ ಸೇರಿ ಇತರೆ ಉಪಕರಣಗಳನ್ನು ಕಳ್ಳರು ಕದೊಯ್ದಿರುವ ಘಟನೆ ನಡೆದಿದ್ದು ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ರೈತ ಮಹೇಶ್ ದೂರು ನೀಡಿದ್ದಾರೆ.

ಉತ್ತಂಗೆರೆಹುಂಡಿ ಗ್ರಾಮದ ರೈತ ಮುಖಂಡ ಮಹೇಶ್ ಜಮೀನಿನಲ್ಲಿ ಈ ಕಳವು ನಡೆದಿದ್ದು ಶನಿವಾರ ಬೆಳಗ್ಗೆ ಜಮೀನಿಗೆ ತೆರಳಿದ್ದಾಗ ಘಟನೆ ಬೆಳಕಿಗೆ ಬಂದಿದೆ. ಜಮೀನಿನ ಗೇಟ್ ಬೀಗ ಮುರಿದು ಒಳನುಗ್ಗಿರುವ ಖದೀಮರು, ಮೋಟಾರ್ ಮನೆಯ ಬಾಗಿಲನ್ನು ಒಡೆದು ಪಂಪ್ ಸೆಟ್ ಮೋಟರ್ ಗೆ ಅಳವಡಿಕೆ ಮಾಡಿದ್ದ 250 ಮೀ ಕೇಬಲ್



ಅನ್ನು ಕಳ್ಳತನ ಮಾಡಿದ್ದಾರೆ. ಜೊತೆಗೆ, ಸೋಲಾರ್ ಬೇಲಿಗೆ ಅಳವಡಿಸಿದ್ದ ಬ್ಯಾಟರಿ, ಸ್ಟಾಟರ್ ನ್ನು ಕದ್ದೊಯ್ದಿದ್ದು ಇದರಿಂದ ರೈತನಿಗೆ 50 ಸಾವಿರಕ್ಕೂ ಅಧಿಕ ನಷ್ಟ ಉಂಟಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮಾಹಿತಿ ಅರಿತ ಅಪರಾಧ ವಿಭಾಗದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

# ಬೀದಿ ಬದಿಯ ವ್ಯಾಪಾರಿಗಳಿಂದ ರಾಮನವಮಿ

ಕೆ.ಆರ್.ಪೇಟೆ, ತ್ರೇತಾಯುಗದ ಕೊನೆಯ ಘಟ್ಟದಲ್ಲಿ ಅಯೋಧ್ಯೆಯ ರಾಜ ದಶರಥನ ಮಗನಾಗಿ ಜನಿಸಿದ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ ಪ್ರಭುವಿನ ಆಡಳಿತವು ಧರ್ಮನಿಷ್ಠೆ, ಮತ್ತುಬ ಕರ್ತವ್ಯ ನಿಷ್ಠೆಯಿಂದ ಅತ್ಯಂತ ಶ್ರೇಷ್ಠವಾದ ಆಡಳಿತವಾಗಿತ್ತು. ಸತ್ಯಸಂಧನಾದ ರಾಮನು, ಪ್ರಜಾಪರಿಪಾಲಕನಾಗಿ ರಾಜ್ಯದ ಆಡಳಿತ ನಡೆಸಿದನು. ಹಾಗಾಗಿ ಶ್ರೀರಾಮಚಂದ್ರನ ಆದರ್ಶ ಗುಣಗಳು ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ದಾರಿ ಎಂದು ತಾಲ್ಲೂಕು ಜಯ ಕರ್ನಾ ಟಕ ಸಂಘಟನೆಯ ಅಧ್ಯಕ್ಷ ಹೆಚ್.ಆರ್.ಸೋಮಶೇಖರ್ ಹೇಳಿದರು.

ಅವರು ಪಟ್ಟಣದ ಶ್ರೀ ಚಾಮುಂಡೇಶ್ವರಿ ಬೀದಿ ಬದಿ ವ್ಯಾಪಾರಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀರಾಮನವಮಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿಯನ್ನು ವಿತರಿಸಿ ಮಾತನಾಡಿದರು. ಶ್ರೀರಾಮಚಂದ್ರನ ಆದರ್ಶ ಗುಣಗಳು ಹಾಗೂ ಪ್ರಜಾಪಾಲನ ರೀತಿಯು ಇಂದಿನ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಹಿಡಿದ ಕನ್ನಡಿ ಯಾಗಿದ್ದು ರಾಮ ರಾಜ್ಯದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹಾತ್ಮ ಗಾಂಧೀಜಿಯವರು ಶ್ರೀರಾಮಚಂದ್ರ ಪ್ರಭುವಿನ ಅಪ್ಪಟ ಅಭಿಮಾನಿಯಾಗಿದ್ದು ಮಾತ್ರವಲ್ಲದೆ ರಾಮ ಭಜನೆಯನ್ನು ತಮ್ಮ ಜೀವನದ ಉಸಿರನ್ನಾಗಿಸಿಕೊಂಡಿದ್ದರು



ಎಂದರು. ಶ್ರೀ ಚಾಮುಂಡೇಶ್ವರಿ ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷೆ ರತ್ನಮ್ಮ, ಕಾರ್ಯದರ್ಶಿ ದ್ರಾಕ್ಷಾಯಿಣಿ, ಗೌರವಾಧ್ಯಕ್ಷ ವೆಂಕಟೇಶ್, ಉಪಾಧ್ಯಕ್ಷೆ ಅನು, ಖಜಾಂಚಿ ಅಪ್ಸರ್, ಸಹಕಾರ್ಯದರ್ಶಿ ಚಂದ್ರು, ಸಂಘಟನಾ ಕಾರ್ಯದರ್ಶಿ ಮಂಜುಳಾ, ಸಂಘದ ಕರ?ಯಕಾರಿ ಸಮಿತಿ ಸದಸ್ಯರಾದ ನಾಗಮ್ಮ, ಇಂದ್ರಮ್ಮ, ಮುಬಾರಕ್ಕ, ಜಯಲಕ್ಷಿ ?ಮ, ಮಂಗಳಮ್ಮ, ಲಕ್ಷಿ ?ಮ, ಚಿನ್ನು, ಶಶಿಕಲಾ, ಚೈತ್ರ, ಅಗ್ರಹಾರದ ಶ್ರೀರಾಮ ಭಜನಾ ಸಮಿತಿ ಅಧ್ಯಕ್ಷ ಹಣ್ಣಿನ ಅಂಗಡಿ ರಾಮಣ್ಣ, ಕಡಲೆಕಾಯಿ ಕೃಷ್ಣ, ಕಾಳಪ್ಪ, ಟೈಲರ್ ರಮೇಶ್, ತಾಲ್ಲೂಕು ಅಪ್ಪು ಯುವ ಸಾಮ್ರಾಜ್ಯ ಸೇವಾ ಟ್ರಸ್ಟಿನ ಅಧ್ಯಕ್ಷ ಕಾಮನಹಳ್ಳಿ ಮಹೇಶ್, ತಾಲ್ಲೂಕು ಆಟೋ ಚಾಲಕರ ಸಂಘದ ಅಧ್ಯಕ್ಷ ವಾಸುದೇವ್, ಸಮಾಜ ಸೇವಕರ್ತ ಬೇಕರಿ ದಿನೇಶ್, ಪುರಸಭೆ ಮಾಜಿ ಸದಸ್ಯರಾದ ಕೆ. ಎನ್.ನಂದೀಶ್, ಕೆ.ಆರ್.ನೀಲಕಂಠ ಸೇರಿದಂತೆ ನೂರಾರು ಜನರು ಭಾಗವಹಿಸಿದರು.


**ರಂಗಕರ್ಮಿ ಕೆ.ವೆಂಕಟರಾಜು ಹೇಳಿಕೆ**

# ವ್ಯಕ್ತಿತ್ವ ರೂಪಿಸುವ ಶಕ್ತಿ ರಂಗಭೂಮಿಗಿದೆ

ಚಾಮರಾಜನಗರ, ಸಿನಿಮಾ ಕ್ಷೇತ್ರ ಕಲಾವಿದರಿಗೆ ಹಣ, ಪ್ರಸಿದ್ಧಿ ತಂದುಕೊಟ್ಟರೆ ರಂಗಭೂಮಿ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಪ್ರೇರೇಪಣೆ ನೀಡಲಿದೆ ಎಂದು ರಂಗಕರ್ಮಿ ಕೆ.ವೆಂಕಟರಾಜು ಅಭಿಪ್ರಾಯ ಪಟ್ಟರು.

ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ ರಂಗವಾಹಿನಿ ಟ್ರಸ್ಟ್ ಮತ್ತು ರೋಟರಿ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ವಿಶ್ವರಂಗಭೂಮಿ ದಿನಾಚರಣೆಯಲ್ಲಿ ಮಾತನಾಡಿದರು. ಎರಡು, ಮೂರು ದಶಕಗಳ ಹಿಂದೆ ರಂಗಭೂಮಿ ಸುವರ್ಣ ಯುಗದಲ್ಲಿತ್ತು. ಆಗಿನ ರಂಗ ಕಲಾವಿದರು ರಂಗಭೂಮಿಯನ್ನು ಅವಲಂಭಿಸಿ ಬದುಕುಕಟ್ಟಿಕೊಂಡಿದ್ದರು. ಬದಲಾವಣೆಯ ಪರ್ವದಲ್ಲಿ ರಂಗಭೂಮಿ ಹಿಂದಿನ ವೈಭವವನ್ನು ಕಳೆದುಕೊಂಡಿದ್ದು, ಕಲಾವಿದರು ಪ್ರಮುಖ ವೃತ್ತಿಯನ್ನಾಗಿ ನೆಚ್ಚಿ ಜೀವನ ನಡೆಸಲು ಸಾಧ್ಯವಿಲ್ಲ ಎಂದು ಹೇಳಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ ಮಾತನಾಡಿ ಗಡಿ ಜಿಲ್ಲೆ ಚಾಮರಾಜನಗರ ಕಲಾವಿದರ ತವರೂರಾಗಿದೆ. ಡಾ.ರಾಜ್ ಕುಮಾರ್, ಸುಂದರಕೃಷ್ಣ ಅರಸ್ ಸೇರಿದಂತೆ ಅನೇಕ ಮೇರು ನಟರು ನಮ್ಮ



ಜಿಲ್ಲೆಯವರೇ ಎಂಬುದು ಹೆಮ್ಮೆತರಿಸಿದೆ ಎಂದರು.

**ರಂಗ ಸನ್ಮಾನ**

ಹಿರಿಯ ರಂಗಭೂಮಿ ಕಲಾವಿದರಾದಘಟಂ ಕೃಷ್ಣ ಹರದನಹಳ್ಳಿ, ಮಾಧು (ಮಹದೇವು) ಚಾಮರಾಜನಗರ, ಎಂ.ಬಸವಣ್ಣ ಉಮ್ಮತ್ತೂರು, ಶಿವನಂಜಯ್ಯ ರಾಮಸಮುದ್ರ ಅವರನ್ನು ಸನ್ಮಾನಿಸಲಾಯಿತು.ಹಿರಿಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜು ರಂಗಭೂಮಿ ಸಂದೇಶ ಓದಿದರು. ಕಲಾವಿದ ಉಮ್ಮತ್ತೂರು ಬಸವರಾಜು ಮಾತನಾಡಿದರು.ರಂಗವಾಹಿನಿ ಸಂಸ್ಥೆಯ ಅಧ್ಯಕ್ಷ ಸಿ.ಎಂ.ನರಸಿಂಹ ಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಕಲಾವಿದರಾದ ರಾಜಶೇಖರಗೌಡ, ಕಲ್ಲಂಬಳ್ಳಿ ರಾಮಣ್ಣ, ವೆಂಕಟರಮಣ ಸ್ವಾಮಿ,ಮಾಂಬಳ್ಳಿ ಅರುಣ್ ಕುಮಾರ್, ಮಹದೇವಯ್ಯ, ಎಂ.ಎನ್. ಮಹದೇವಯ್ಯ ಪುರುಷೋತ್ತಮ ನಂಜದೇವನಪುರ. ಕುಮಾರ್ ಬದನಗುಪ್ಪೆ, ಯಡಿಯೂರು ಮಹದೇವ, ಜಯರಾಜ್, ಬಾಗಳಿ ರಾಜಶೇಖರ, ತಬಲ ನಾಗರಾಜು ಹೊಂಗನೂರು ರಂಗಗೀತೆಗಳನ್ನು

## 153 ದಿನಗಳ ರೈತರ ಧರಣಿಗೆ ಅಂತ್ಯ



**ಹನೂರು:** ಕಳೆದ 153 ದಿನಗಳಿಂದ ನಡೆಯುತ್ತಿದ್ದ ರೈತರ ಅಹೋರಾತ್ರಿ ಧರಣಿ ಶಾಸಕರ ಮಧ್ಯಸ್ಥಿಕೆಯಿಂದ ಅಂತ್ಯ ಗೊಂಡಿತು.

ವಡಕೆಹಳ್ಳ ಗ್ರಾಮದಲ್ಲಿ ದಂಟಳ್ಳಿ ಏತ ನೀರಾವರಿ ಯೋಜನೆಗೆ ಆಗ್ರಹಿಸಿ ರೈತ ಸಂಘಟನೆ ನಡೆಸುತ್ತಿದ್ದ ಪ್ರತಿಭಟನೆಗೆ ಶಾಸಕ ಎಂ.ಆರ್. ಮಂಜುನಾಥ್ ಮನವೊಲಿಸಿ ತೆರೆ ಎಳೆದರು.

ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ರಸ್ತೆ, ಸೇತುವೆ ಹಾಗೂ ನೀರಾವರಿ ಯೋಜನೆಗಳನ್ನು ಅಭಿವೃದ್ಧಿಪಡಿಸ ಲಾಗುತ್ತಿದೆ. 490 ಕೋಟಿ ರೂ ವೆಚ್ಚದಲ್ಲಿ ಉಡುತೊರೆ ಹಳ್ಳ ಜಲಾಶಯಕ್ಕೆ ಕಾವೇರಿ ನೀರು ತರಲು ಅನುಮೋದನೆ ದೊರೆತಿದ್ದು, ಇದರಿಂದ ರೈತರಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂದರು.

## ಅಕ್ರಮ ಮದ್ಯ, ಜೂಜಾಟಕ್ಕೆ 1 ಲಕ್ಷ ದಂಡ ಎಚ್ಚರಿಕೆ

**ಗುಂಡ್ಲುಪೇಟೆ:** ತಾಲೂಕಿನ ಬನ್ನಿತಾಳಪುರ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಹಾಗೂ ಜೂಜಾಟ ನಿಷೇಧಕ್ಕೆ ಕಠಿಣ ಕ್ರಮ ಕೈಗೊಳ್ಳಲಾಗಿದೆ.

ಗ್ರಾಮದಲ್ಲಿ ಮದ್ಯ ಮಾರಾಟ ಅಥವಾ ಜೂಜಾಟ ನಡೆಸಿದರೆ 1 ಲಕ್ಷ ರೂ. ದಂಡ ವಿಧಿಸಲಾಗುವುದು. ಮಾಹಿತಿ ನೀಡಿದವರಿಗೆ 50 ಸಾವಿರ ರೂ. ಬಹುಮಾನ ನೀಡಲಾಗುವುದು ಎಂದು ಗ್ರಾಮದಲ್ಲಿ ಟಾಂಟಾಂ ಮಾಡಿಸಲಾಗಿದೆ. ಗ್ರಾಮಸ್ಥರು ಸಭೆ ನಡೆಸಿ ಯುವಕರು ಮದ್ಯವ್ಯಸನಕ್ಕೆ ಒಳಗಾಗದಂತೆ ಈ ನಿರ್ಧಾರ ಕೈಗೊಂಡಿದ್ದಾರೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.



# ಕೌಶಲ್ಯ ಬೆಳೆಸಿಕೊಳ್ಳಿ, ಕಲಿಕೆಯನ್ನು ಅಪ್ಪಿಕೊಳ್ಳಿ : ವಿನಾಯಕ್ ಹೆಗ್ಡೆ



**ಮೈಸೂರು:** ನಿಮ್ಮ ಆರಂಭಿಕ ಸಂಬಳ ನಿಮ್ಮ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ನಿಮ್ಮ ಕಲಿಯುವ ಸಾಮರ್ಥ್ಯ, ಸಹಯೋಗದ ಮನೋಭಾವ ಮತ್ತು ನಿರಂತರ ಸುಧಾರಣೆಯೇ ನಿಜವಾದ ಯಶಸ್ಸಿನ ದಾರಿ ಎಂದು ಇನ್ಫೋಸಿಸ್ ಮೈಸೂರು ಘಟಕದ ಉಪಾಧ್ಯಕ್ಷ ಹಾಗೂ ಮುಖ್ಯಸ್ಥ ವಿನಾಯಕ್ ಪಿ.ಹೆಗ್ಡೆ ಹೇಳಿದರು.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಶನಿವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ ಪ್ರಾಜೆಕ್ಟ್ ಸ್ಪರ್ಧೆ ?ವೃದ್ಧಿ?2026? ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾಲೇಜಿನ ಎಚ್.ಕೆಂಪೇಗೌಡ ಕ್ರೀಡಾ ಸಂಕೀರ್ಣದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳಿಂದ ಎಲೆಕ್ಟ್ರಿಕಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗಗಳ ವಿದ್ಯಾರ್ಥಿಗಳು ತಮ್ಮ ನವೀನ ಯೋಜನೆಗಳನ್ನು ಪ್ರದರ್ಶಿಸಿದರು. ಮೂರು ದಶಕಗಳಿಗೂ ಅಧಿಕ ತಮ್ಮ ಎಂಜಿನಿಯರಿಂಗ್ ವೃತ್ತಿಜೀವನದ ಅನುಭವವನ್ನು ಹಂಚಿಕೊಂಡ ಹೆಗ್ಡೆ, ಜೀವನಪರ್ಯಂತ ಕಲಿಕೆ ಮತ್ತು ವೈಫಲ್ಯವನ್ನು ಸಕಾರಾತ್ಮಕವಾಗಿ ಎದುರಿಸುವ ಅಗತ್ಯವನ್ನು ಒತ್ತಿ ಹೇಳಿದರು. ?ವೈಫಲ್ಯವು ಅಂತ್ಯವಲ್ಲ; ಅದು ಕಲಿಯಲು ಮತ್ತು ಇನ್ನಷ್ಟು ಬಲಿಷ್ಠರಾಗಲು ಸಿಗುವ ಅವಕಾಶ,? ಎಂದು ಅವರು ತಿಳಿಸಿದರು. ಪ್ರತಿಭೆ ವ್ಯಕ್ತಿಯನ್ನು ಗಮನ ಸೆಳೆಯುವಂತೆ ಮಾಡಬಹುದು, ಆದರೆ ತಂಡದ ಕೆಲಸವೇ ಉತ್ತಮ ಫಲಿತಾಂಶಗಳನ್ನು ತರುತ್ತದೆ ಎಂದು ಹೇಳಿದ ಅವರು, ಇಂದಿನ ಪ್ರಾಜೆಕ್ಟ್‌ಗಳಿಗೆ ಸಹಯೋಗ, ಸಮನ್ವಯ ಮತ್ತು ಪರಿಣಾಮಕಾರಿ ಸಂವಹನ ಅತ್ಯಂತ ಅಗತ್ಯವೆಂದು ಅಭಿಪ್ರಾಯಪಟ್ಟರು.

ಇನ್ಫೋಸಿಸ್ ಮೈಸೂರಿನ ಸಹ ಉಪಾಧ್ಯಕ್ಷ ಕೆ.ಎಸ್.ಸುಂದರ್ ಮಾತನಾಡಿ, ಭವಿಷ್ಯದ ವೃತ್ತಿಪರ ಜಗತ್ತು ವೇಗವಾದ ತಾಂತ್ರಿಕ ಬದಲಾವಣೆಗಳು ಮತ್ತು ಕೃತಕ ಬುದ್ಧಿಮತ್ತೆಯಿಂದ ರೂಪುಗೊಳ್ಳುತ್ತಿದೆ ಎಂದರು. ತಾಂತ್ರಿಕ ಜ್ಞಾನ, ವಿಷಯ ಪರಿಣತಿ ಮತ್ತು ಗಟ್ಟಿಯಾದ ಮೂಲಭೂತ ಅರಿವಿನ ಜೊತೆಗೆ ಸಾಮಾಜಿಕ ಕೌಶಲ್ಯಗಳೂ ಸಮಾನವಾಗಿ ಅಗತ್ಯವೆಂದು ಅವರು ಹೇಳಿದರು. ?ಎಐ ಉಪಕರಣಗಳು ಅಸ್ತಿತ್ವದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಬಹುದು; ಆದರೆ ನಾವೀನ್ಯತೆ ಮಾನವನ ಸೃಜನಶೀಲತೆಯಿಂದಲೇ ಬರುತ್ತದೆ. ವಿದ್ಯಾರ್ಥಿಗಳು ಕುತೂಹಲದಿಂದ ಅವಲೋಕಿಸಿ, ನಿರಂತರವಾಗಿ ಕಲಿಯುತ್ತಾ ಹೊಸ ಆವಿಷ್ಕಾರಗಳತ್ತ ಹೆಜ್ಜೆ ಹಾಕಬೇಕು ಎಂದು ಹೇಳಿದರು. ಈ ಸ್ಪರ್ಧೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ತೆಲಂಗಾಣ ರಾಜ್ಯಗಳಿಂದ ಒಟ್ಟು 53 ತಂಡಗಳು ಭಾಗವಹಿಸಿ ವಿವಿಧ ಎಂಜಿನಿಯರಿಂಗ್ ಕ್ಷೇತ್ರಗಳ ಯೋಜನೆಗಳನ್ನು ಪ್ರದರ್ಶಿಸಿವೆ. ಕಾರ್ಯಕ್ರಮದಲ್ಲಿ ವಿ.ವಿ.ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ವಿ.ವಿ.ಸಿ.ಇ ಪ್ರಾಂಶುಪಾಲ ಬಿ.ಸದಾಶಿವ ಗೌಡ, ಉಪ ಪ್ರಾಂಶುಪಾಲೆ ಶೋಭಾ ಶಂಕರ್ ಹಾಗೂ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ. ಕೆ.ಗೋಪಾಲರೆಡ್ಡಿ ಉಪಸ್ಥಿತರಿದ್ದರು.

## ಶಕುಂತಲಾ ಹೆಗಡೆ ಆರೋಗ್ಯ ವಿಚಾರಿಸಿದ ಬಸವರಾಜ ಹೊರಟ್ಟಿ



**ಬೆಂಗಳೂರು:** ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆ ಅವರ ಪತ್ನಿ ಶಕುಂತಲಾ ಹೆಗಡೆಯವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಈ ವೇಳೆ ಪುತ್ರಿ ಮಮತಾ ನಿಚ್ಚಾನಿ ಅವರು ಕುಟುಂಬದ ತ್ಯಾಗಗಳನ್ನು ಸ್ಮರಿಸಿದರು. ಭಾರತ–ಚೀನಾ ಯುದ್ಧದ ಸಂದರ್ಭದಲ್ಲಿ ಕುಟುಂಬದ ಆಭರಣಗಳನ್ನು ದಾನ ಮಾಡಿದ ಘಟನೆ ಉಲ್ಲೇಖಿಸಲಾಯಿತು. ಶಕುಂತಲಾ ಹೆಗಡೆಯವರು ಇಂದಿಗೂ ಸರಳ ಜೀವನ ನಡೆಸುತ್ತಿರುವುದು ಅವರ ಆದರ್ಶ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

## ನೇಪಾಳಕ್ಕೆ ಅತ್ಯಂತ ಕಿರಿಯ ಪ್ರಧಾನಿ

### ಬೆಂಗಳೂರಿನಲ್ಲಿ ಶಿಕ್ಷಣ ಪಡೆದಿದ್ದ ಬಾಲೇಂದ್ರ ಶಾ



**ಕಠ್ಮಂಡು:** ಜೆನ್ ಝಿ ಗಲಭೆಯಿಂದ ಸರ್ಕಾರ ಪತನವಾಗಿದ್ದ ನೇಪಾಳದ 47ನೇ ಪ್ರಧಾನಿಯಾಗಿ ಮಾಜಿ ರಯಾಪರ್ ಬಾಲೇಂದ್ರ ಶಾ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. 35ನೇ ವಯಸ್ಸಿಗೆ ಪ್ರಧಾನಿಯಾಗುವ ಮೂಲಕ ನೇಪಾಳದ ಅತ್ಯಂತ ಕಿರಿಯ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬೆಂಗಳೂರಿನ ನಿಟ್ಟೆ ಮೀನಾಕ್ಷಿ ವಿವಿಯಲ್ಲಿ ಬಾಲೇಂದ್ರ ಶಾ ಶಿಕ್ಷಣ ಪಡೆದಿದ್ದರು.

ರಾಷ್ಟ್ರೀಯ ಸ್ವತಂತ್ರ ಪಕ್ಷವು ಬಾಲೇಂದ್ರ ಶಾ ಅವರನ್ನು ತನ್ನ ಸಂಸದೀಯ ಪಕ್ಷದ ನಾಯಕನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತ್ತು. ಪಕ್ಷದ ಅಧ್ಯಕ್ಷ ರಬಿ ಲಮಿಚಾನೆ ಅವರು ಈ ಹುದ್ದೆಗೆ ಶಾ ಹೆಸರನ್ನು ಪ್ರಸ್ತಾಪಿಸಿದಾಗ ಸರ್ವಾನುಮತದ ಅನುಮೋದನೆ ದೊರಕಿತ್ತು.

ನೇಪಾಳದ ಸಾರ್ವತ್ರಿಕ ಚುನಾವಣೆಯಲ್ಲಿ ಆರ್‌ಎಸ್‌ಪಿ ಪಕ್ಷ ಒಟ್ಟು 275 ಸ್ಥಾನಗಳಲ್ಲಿ 182ರಲ್ಲಿ ಭರ್ಜರಿ ಗೆಲುವು ಸಾಧಿಸಿ ಬಹುಮತ ಪಡೆದಿತ್ತು. ನೇಪಾಳದಲ್ಲಿ ಈ ಹಿಂದಿನ ಸರ್ಕಾರಗಳ ಭ್ರಷ್ಟಾಚಾರವನ್ನು ವಿರೋಧಿಸಿ ಜೆನ್ ಝಿ ಹೋರಾಟ ನಡೆಸಿತ್ತು. ಚುನಾವಣೆಯಲ್ಲಿ ನಾಲ್ಕು ಬಾರಿ ಪ್ರಧಾನಿಯಾಗಿದ್ದ ಕೆಪಿ ಶರ್ಮಾ ಒಲಿ ಅವರನ್ನು ಶಾ ಪರಾಜಯಗೊಳಿಸಿ ಗೆಲುವು ಸಾಧಿಸಿದ್ದರು. ನೇಪಾಳ ಚುನಾವಣೆಯಲ್ಲಿ ಆರ್‌ಎಸ್‌ಪಿ ಪ್ರಚಂಡ ಗೆಲುವು ಸಾಧಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿತ್ತು.

ಕಳೆದ ವರ್ಷ ಭ್ರಷ್ಟಾಚಾರದ ವಿರುದ್ಧ ಯುವಕರು ನಡೆಸಿದ ದಂಗೆಯನ್ನು ನಿಯಂತ್ರಿಸಲಾಗದೆ ನೇಪಾಳ ಸರ್ಕಾರ ಪತನಗೊಂಡಿತ್ತು. ಬಳಿಕ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರನ್ನು ಸೋಲಿಸಿರುವ ಬಾಲೇಂದ್ರ ಶಾ ನೇಪಾಳದ ನೂತನ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

## ಏ.1ರಿಂದ ಡಿಜಿಟಲ್ ಜನಗಣತಿ: ಡೀಸಿ ಜಿ.ಪ್ರಭು

**ಚಿಕ್ಕಬಳ್ಳಾಪುರ:** ದೇಶದ ಮೊಟ್ಟಮೊದಲ ಡಿಜಿಟಲ್ ಜನಗಣತಿ ಕಾರ್ಯಕ್ಕೆ ಏಪ್ರಿಲ್ 1ರಂದು ಜಿಲ್ಲೆಯಲ್ಲಿ ಚಾಲನೆ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ. ಪ್ರಭು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2026–27ನೇ ಸಾಲಿನ ಜನಗಣತಿ ಕಾರ್ಯ ಏಪ್ರಿಲ್ 1ರಿಂದ ಮೇ 15ರವರೆಗೆ ನಡೆಯಲಿದ್ದು, ಇದರಿಗಾಗಿ 2,533 ಗಣತಿದಾರರು ಮತ್ತು 422 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದರು. ಜಿಲ್ಲೆಯಲ್ಲಿ ಒಟ್ಟು 3,121 ಗಣತಿ ಬ್ಲಾಕ್‌ಗಳನ್ನು ರಚಿಸಲಾಗಿದೆ.

ಸ್ವಯಂ ಜನಗಣತಿ ವ್ಯವಸ್ಥೆ

ಜನಗಣತಿಯ ಮೊದಲ ಹಂತವಾಗಿ ಏಪ್ರಿಲ್ 1ರಿಂದ 15ರವರೆಗೆ ಸ್ವಯಂ ಜನಗಣತಿ (Self Enumeration) ನಡೆಯಲಿದೆ.

## 30 ಕೆಜಿ ಸಿಂಥೆಟಿಕ್ ಡ್ರಗ್ಸ್ ಪತ್ತೆ, ಇಬ್ಬರ ಬಂಧನ



**ಮೈಸೂರು:** ಇತ್ತೀಚೆಗೆ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕ ಘಟಕ ಮತ್ತು ಡ್ರಗ್ಸ್‌ಗೆ ಬಳಸುವ ರಾಸಾಯನಿಕ ವಸ್ತುಗಳು ಪತ್ತೆಯಾಗಿತ್ತು. ಆದರೆ, ಇದೀಗ ಜಿಲ್ಲೆಯ ಹುಣಸೂರು ತಾಲ್ಲೂಕು ಭಾಗದಲ್ಲೂ ಡ್ರಗ್ಸ್ ಜಾಲ ಪತ್ತೆಯಾಗಿದೆ.

ಇದು ಈ ಭಾಗದಲ್ಲಿ ಡ್ರಗ್ಸ್ ಬೇರೂರಿರುವುದನ್ನು ಸ್ಪಷ್ಟಪಡಿಸಿದಂತಿದೆ.

ಹುಣಸೂರು ತಾಲ್ಲೂಕು ದಾನಸಪುರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಡ್ರಗ್ಸ್ ಮಾರಾಟ ಜಾಲವನ್ನು ಜಿಲ್ಲಾ ಪೊಲೀಸರು ಭೇದಿಸಿದ್ದು, ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಗ್ರಾಮದ ಮನೆಯೊಂದರಲ್ಲಿ ಸಿಂಥೆಟಿಕ್ ಡ್ರಗ್ಸ್ ದಾಸ್ತಾನು ಮಾಡಿರುವ ಬಗ್ಗೆ ಮಾಹಿತಿ ಅರಿತ ಪೊಲೀಸರು ಏಕಾಏಕಿ ದಾಳಿ ನಡೆಸಿದ್ದಾರೆ. ಈ ವೇಳೆ ಕೋಟ್ಯಾಂತರ ಮೌಲ್ಯದ 30 ಕೆ.ಜಿಗಿಂತಲೂ ಹೆಚ್ಚಿನ ಸಿಂಥೆಟಿಕ್ ಡ್ರಗ್ಸ್ ಮತ್ತೆಯಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆರೋಪಿಗಳಿಬ್ಬರು ಮೈಸೂರಿನವರೇ, ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಪತಿ ಮೃತಪಟ್ಟ ಮಾರನೇ ದಿನವೇ ಕರ್ತವ್ಯಕ್ಕೆ ಹಾಜರಾದ ಶಿಕ್ಷಕಿ!

**ಎಚ್.ಡಿ.ಕೋಟೆ:** ಪತಿ ಮೃತಪಟ್ಟ ಮಾರನೇ ದಿನವೇ ಶಿಕ್ಷಕಿಯೊಬ್ಬರು ಶಾಲೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಹಂಪಾಪುರ ಸಮೀಪದ ಜಿ.ಬಿ.ಸರಗೂರು ಸರ್ಕಾರಿ ಪ್ರೌಢಶಾಲೆಯ ಪ್ರಭಾರ ಮುಖ್ಯ ಶಿಕ್ಷಕಿ ಜ್ಯೋತಿ ಅವರ ಪತಿ ಕಿರಣ್ ಕುಮಾರ್ (47), ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಆದ್ರೆ ಮಾರ್ಚ್ 28 ರಂದು ಎಸ್‌ಎಸ್‌ಎಲ್‌ಸಿ ಗಣಿತ ಪರೀಕ್ಷೆ ಇರುವ ಕಾರಣ ವಿದ್ಯಾರ್ಥಿಗಳ ಭವಿಷ್ಯಕ್ಕೋಸ್ಕರ ದುಃಖದ ಮಡುವಿನಲ್ಲಿದ್ದರೂ ಜ್ಯೋತಿ ಮರುದಿನವೇ ಶಾಲೆಗೆ ಹಾಜರಾಗಿ ಗಣಿತ ವಿಷಯದ ಬಗ್ಗೆ ಮಕ್ಕಳಿಗೆ ಪೂರ್ವ ಸಿದ್ಧತೆ ಮಾಡಿಸಿದ್ದಾರೆ.

ಶಿಕ್ಷಣಾಧಿಕಾರಿ ಅವರು ನೀವು ರಜೆ ಪಡೆಯಿರಿ ನಾವು ಬೇರೆ ಶಿಕ್ಷಕರನ್ನ ನಿಯೋಜನೆ ಮಾಡ್ತೀವಿ ಅಂದ್ರು ಸಹ ಗಣಿತ ವಿಷಯ ಸಂಪೂರ್ಣವಾಗಿ ನಾನೇ ಬೋಧಿಸಿದ್ದೇನೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಗಣಿತ ಸ್ವಲ್ಪ ಕಠಿಣವಾಗಿರುತ್ತದೆ. ಎಲ್ಲ ವಿದ್ಯಾರ್ಥಿಗಳು ತೇರ್ಗಡೆಯಾಗಬೇಕು ಎಂಬ ಉದ್ದೇಶದಿಂದ ಶಾಲೆಗೆ ಬಂದಿದ್ದೇನೆ. ನಾಳೆಯೂ ಬಂದು ಮಕ್ಕಳೊಂದಿಗೆ ಇರುತ್ತೇನೆ ಎಂದು ಹೇಳಿ ಶಿಕ್ಷಕಿ ಜ್ಯೋತಿ ಅವರು ಜಿ.ಬಿ.ಸರಗೂರು ಗ್ರಾಮದ ಶಾಲೆಗೆ ಹಾಜರಾಗಿ 222 ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಪೂರ್ವ ಸಿದ್ಧತೆ ಕುರಿತು ಮಾರ್ಗದರ್ಶನ ನೀಡಿದ್ದಾರೆ.

ಪೋಷಕರು, ಸಾರ್ವಜನಿಕರು ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳು ಜ್ಯೋತಿ ಅವರ ಕಾರ್ಯಕ್ಕೆ ಗೌರವ ಮತ್ತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.





## ನೂತನ ಬಸ್ ನಿಲ್ದಾಣ ಕಾಮಗಾರಿ ಪರಿಶೀಲಿಸಿದ ಸಚಿವ ಮಹದೇವಪ್ಪ

**ಮೈಸೂರು:** ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ:ಹೆಚ್.ಸಿ ಮಹದೇವಪ್ಪ ಅವರು 120 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಹೊಸ ಬಸ್ ನಿಲ್ದಾಣ ಕಾಮಗಾರಿಯ ಪರಿಶೀಲನೆ ನಡೆಸಿದರು.

ಶೇ.30 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಮಾರ್ಚ್ 2027 ರೊಳಗಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಹಾಗೂ ಗುಣಮಟ್ಟದ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆಎಸ್.ಆರ್.ಟಿ.ಸಿ. ಗ್ರಾಮೀಣ ವಿಭಾಗದ ಜಿಲ್ಲಾ ನಿಯಂತ್ರಕ ಶ್ರೀನಿವಾಸ್ ಅವರು ಕಾಮಗಾರಿ ಕುರಿತು ಮಾಹಿತಿ ನೀಡಿ, ಬನ್ನಿಮಂಟಪದ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಿದ್ದು, ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಬಸ್ ನಿಲ್ದಾಣದ ಒಳಗೆ ಹಾಗೂ ಹೊರ ಭಾಗಕ್ಕೆ ಹೋಗಲು ಪ್ರತ್ಯೇಕ 100 ಅಡಿ ರಸ್ತೆಯ ಅವಶ್ಯಕತೆ ಇರುವುದಾಗಿ ಸಚಿವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಬಸ್ ನಿಲ್ದಾಣ ನಿರ್ಮಾಣಕ್ಕೆ ಬೇಕಿರುವ ಎಲ್ಲಾ ಸೌಲಭ್ಯವನ್ನು ಒದಗಿಸಲಾಗುವುದು. 100 ಅಡಿ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯೋಜನೆ ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಜಿಲ್ಲಾಧಿಕಾರಿ ಲಕ್ಷ್ಮಿ ಕಾಂತ ರೆಡ್ಡಿ ಜಿ. ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಜನಪರ ಆಡಳಿತ ನೀಡುವಲ್ಲಿ ಸರ್ಕಾರ ವಿಫಲ: ನಿಖಿಲ್ ಕಿಡಿ



**ಎಚ್.ಡಿ.ಕೋಟೆ:** ರಾಜ್ಯದಲ್ಲಿ ಜಾತ್ಯತೀತ ಜನತಾದಳ–ಬಿಜೆಪಿಯ ಮೈತ್ರಿಯ ಸರ್ಕಾರ ಅಧಿಕಾರಕ್ಕೆ ಬಂದು ಜನಪರ ಆಡಳಿತ ನೀಡುವ ದಿನಗಳು ಹತ್ತಿರವಾಗುತ್ತಿವೆ ಎಂದು ಜಾ.ದಳ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಪಟ್ಟಣದಲ್ಲಿ ಜನರೊಂದಿಗೆ ಜನತಾದಳ ಸಮಾವೇಶವನ್ನು ಉದ್ಘಾಟಿಸಿ ಮಾತಾಡಿದ ಅವರು, ರಾಜ್ಯ ಸರ್ಕಾರ ಜನಪರ ಆಡಳಿತ ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ. ರಾಜ್ಯ ಸರ್ಕಾರ ಸಾಲದ ಹೊರೆಯ ಬಜೆಟ್ ಮಂಡಿಸಿದೆ. ಆ ಮೂಲಕ ರಾಜ್ಯದ ಪ್ರತಿಯೊಬ್ಬ ಜನಸಾಮಾನ್ಯರ ಮೇಲೆ ಸಾಲದ ಹೊರೆ ಹೊರಿಸಿದ್ದಾರೆ.

ಒಂದೆಡೆ ಮಾನವ ವನ್ಯಪ್ರಾಣಿಗಳ ಸಂಘರ್ಷದಿಂದ ಪ್ರತಿ ವರ್ಷ ಅನೇಕ ರೈತರು ಬಲಿಯಾಗುತ್ತಿದ್ದಾರೆ. ಅಲ್ಲದೆ, ಅವರು ಬೆಳೆದ ಬೆಳೆಗಳು ನಾಶವಾಗುತ್ತಿವೆ. ಕಾಡುಪ್ರಾಣಿಗಳ ಹಾವಳಿಯಿಂದ ಸಂತ್ರಸ್ತರಾದ ರೈತ ರೈತ ಕುಟುಂಬಗಳಿಗೆ ದೊಡ್ಡ ಮೊತ್ತದ ಪರಿಹಾರ ನೀಡಲು ಸರ್ಕಾರದ ಬಳಿ ಹಣವೇ ಇಲ್ಲ. ಆದರೆ, ಸರ್ಕಾರ ಜನರ ತೆರಿಗೆ ಹಣವನ್ನು ಬೇರೆ ರಾಜ್ಯಗಳಿಗೆ ಕೋಟಿಗಟ್ಟಲೆ ನೀಡುತ್ತಿರುವುದು ವಿಪರ್ಯಾಸವಾಗಿದೆ ಎಂದರು.

ಮಾನವ ಮತ್ತು ಪ್ರಾಣಿಗಳ ಸಂಘರ್ಷಕ್ಕೆ ಪ್ರತಿ ವರ್ಷ ಅಪಾರ ನಷ್ಟವಾಗುತ್ತಿದ್ದು, ಇದನ್ನು ನಿಯಂತ್ರಿಸಲು ಮುಖ್ಯಮಂತ್ರಿಗಳು ಮತ್ತು ಅರಣ್ಯ ಸಚಿವರು ವಿಫಲರಾಗಿದ್ದಾರೆ. ಗ್ರಾಮಗಳೂ ಅಭಿವೃದ್ಧಿ ಕಾಣದೆ ಮೂಲಸೌಕರ್ಯ ವಂಚಿತವಾಗಿದ್ದು, ಜನಸಾಮಾನ್ಯರ ಆದಷ್ಟು ಬೇಗ ಈ ಸರ್ಕಾರವನ್ನು ಕಿತ್ತೊಗೆಯಬೇಕೆಂಬ ಆಶಾಭಾವನೆ ಹೊಂದಿದ್ದಾರೆ ಎಂದರು.

ಶಾಸಕರಾದ ಜಿ.ಟಿ.ಹರೀಶ್ ಗೌಡ, ಮಂಚೇಗೌಡ, ಮಾಜಿ ಶಾಸಕರಾದ ಸಾ.ರಾ. ಮಹೇಶ್, ಕೆ.ಮಹಾದೇವ, ಮೈ ಮುಲ್ ಮಾಜಿ ಅಧ್ಯಕ್ಷ ಪ್ರಸನ್ನ, ಕೆ.ಎಂ.ಕೃಷ್ಣನಾಯಕ, ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ತಾಲ್ಲೂಕು ಅಧ್ಯಕ್ಷ ರಾಜೇಂದ್ರ, ಗೋಪಾಲಸ್ವಾಮಿ, ಕಾಳಿಹುಂಡಿ ಸಿದ್ದೇಗೌಡ, ನರಸಿಂಹೇಗೌಡ, ಯೋಗನರಸಿಂಹಗೌಡ, ಬೆಳಗನಳ್ಳಿ ಶಿವರಾಜ, ಕರವೇ ನಟರಾಜ್, ಮಹೇಶ್ ಗುಂಡತ್ತೂರು, ಪ್ರಕಾಶ್, ಸೋಲಾರ್ ಪ್ರದೀಪ ಮತ್ತಿತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

# ಯುವಜನತೆ ನಾಡಿನ ಇತಿಹಾಸ ಅರಿಯಲಿ



**ಮಂಡ್ಯ:** ಯುವಜನತೆ ನಮ್ಮ ನಾಡಿನ ಇತಿಹಾಸವನ್ನು ತಿಳಿದುಕೊಳ್ಳುವುದರ ಜೊತೆಗೆ ಸಮಾಜದ ಅನ್ಯಾಯ–ದಬ್ಬಾಳಿಕೆ ವಿರುದ್ಧ ಹೋರಾಡಿದ ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಶ್ರೀ ಅಗ್ನಿಬನ್ನಿರಾಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಗ್ನಿಬನ್ನಿರಾಯರು (ಅಗ್ನಿವಂಶ ಕ್ಷತ್ರಿಯರು) ತಿಗಳ ಸಮುದಾಯದ ಮೂಲಪುರುಷರಾಗಿದ್ದು, ಅನ್ಯಾಯದ ವಿರುದ್ಧ ಹೋರಾಡಿದ ವೀರಪುರುಷರು ಎಂದು ತಿಳಿಸಿದರು. ಭವಿಷ್ಯ ಪುರಾಣದ ಪ್ರಕಾರ ಅಬು ಪರ್ವತದಲ್ಲಿ ನಡೆದ ಯಜ್ಞದಲ್ಲಿ ಅಗ್ನಿಕುಂಡದಿಂದ ಉದ್ಭವಿಸಿದ ನಾಲ್ವರು ಕ್ಷತ್ರಿಯರಲ್ಲಿ ಇವರೂ ಒಬ್ಬರು ಎಂಬ ನಂಬಿಕೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಬಿ.ವಿ. ನಂದೀಶ್, ನಿಗಮದ ಅಧ್ಯಕ್ಷ ಸಂದೇಶ್, ಇತಿಹಾಸ ಸಂಶೋಧಕ ಮಧುಸೂದನ್ ಕೆ.ಆರ್.ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

## ವೈರಮುಡಿಗೆ ಲಕ್ಷ್ಮೀಜನಾರ್ಧನಸ್ವಾಮಿ ಸನ್ನಿಧಿಯಲ್ಲಿ ಪೂಜೆ




**ಮಂಡ್ಯ:** ವಿಶ್ವವಿಖ್ಯಾತ ವೈರಮುಡಿ ಬ್ರಹ್ಮೋತ್ಸವದ ಅಂಗವಾಗಿ ನಗರದ ಲಕ್ಷ್ಮೀಜನಾರ್ಧನಸ್ವಾಮಿ ದೇವಾಲಯದಲ್ಲಿ ವೈರಮುಡಿಗೆ ವಿಶೇಷ ಪೂಜೆ ಸಲ್ಲಿಸಿ ಮೇಲುಕೋಟೆಗೆ ತೆಗೆದುಕೊಂಡು ಹೋಗುವ ಸಂಪ್ರದಾಯ ಸರಾಗವಾಗಿ ನಡೆಯುತ್ತಿದೆ ಎಂದು ವಿಶ್ವಕರ್ಮ ನಿಗಮದ ಅಧ್ಯಕ್ಷ ಸುಜ್ಞಾನಮೂರ್ತಿ ಹೇಳಿದರು.

ಪೂಜೆ ನಂತರ ಮಾತನಾಡಿದ ಅವರು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಮೇಲುಕೋಟೆಗೆ ಆಗಮಿಸಿ ದೇವರ ದರ್ಶನ ಪಡೆಯಬೇಕು ಎಂದು ಮನವಿ ಮಾಡಿದರು. ಚಿನ್ನದ ಬೆಲೆ ಏರಿಕೆಯಿಂದ ಚಿನ್ನದ ಕೆಲಸಗಾರರಿಗೆ ತೊಂದರೆ ಇದ್ದರೂ, ಕುಲಕಸುಬು ನಿರ್ವಹಿಸಲು ದೇವರ ಕೃಪೆ ಇರಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ತಿರುಮಲಾ ಚಾರ್, ಪೇಟೆಬೀದಿ ಸೋಮು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶ್ರೀರಾಮನೀಗೆ ಅಳಿ(ಳ)ಲು ಪ್ರಶ್ನೆ




ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

ಮನದ ಮಾತು...

ಸುತ್ತಲೂ ಹಚ್ಚುಹಸುರಿನ ವಾತಾವರಣ. ಒತ್ತೊ?ತ್ತಾಗಿ ಬೆಳದ, ಬೀಟ, ತೇಗ, ಸಾಗುವಾನಿ, ಶ್ರೀಗಂಧದ ಮರಗಳು. ಹಿತ್ತಲಿನಲ್ಲಿ ಹಲಸು,ಹುಣಸೆ, ನುಗ್ಗೆ ಮರಗಳು, ಮುಂದೆ, ಮಾವು,ತೆಂಗು, ಪೇರಲ, ನಿಂಬೆ, ಚಕ್ಕೋತ,ಬೆಳೆಗಳು, ಸೊಕ್ಕಿನಿಂದ ಗಾಳಿಗೆ ನೆಲಕೆ ತಾಗುವಂತೆ, ತೂಗುವ ಫಲಗಳು. ಮಧ್ಯದಲ್ಲಿ ಹಾಸುಹುಲ್ಲಿನಿಂದ ಮಾಡಿದ ಪರ್ಣ ಕುಟೀರ!! ಅದಕ್ಕೆ ಸುತ್ತಲೂ ಬಿದಿರು ಗಳಿಂದ ಮಾಡಿದ ಚೌಕಾಕಾರದ ಪೌಳಿ, ಬಿದಿರಿನ ಸುತ್ತಲೂ ಪ್ರಾಕಾರಕೆ ಬಿಗಿದಪ್ಪಿ ಬಾಚಿ ತಬ್ಬಿಕೊಂಡು ಮಲಗಿರುವ ಸುಕುಮಾರ ಜಾಜಿ.... ಮಲ್ಲಿಗೆ

ನಭಕೆ ಮುತ್ತಿಡುವಂತೆ ಬೆಳದ ಕೆಂಡಸಂಪಿಗೆ, ಅಂಗಳದ ತುಂಬ ರಂಗೋಲಿಯಂತೆ ಚಲ್ಲಿರುವ ಪಾರಿಜಾತ. ಬಕುಲ, ದಾಸವಾಳ, ಗುಲಾಬಿ, ಹೊನ್ನಾವರೆ, ಗುಂಡು ಮಲ್ಲಿಗೆ... ಒಂದಾ ಎರಡಾ ಸುತ್ತಲೂ ಪಸರಿಸಿರುವ ಹೂವಿನ ಸುಗಂಧ,ಮದಿರೆಯ ಮತ್ತನ್ನು ಮೀರಿ ನಾಸಿಕಕೇರಿ, ನರನಾಡಿಗಳಲ್ಲಿ ರೋಮಾಂಚನ ಸಂಚಾರ, ಸಮೃದ್ಧ ವಾಗಿ ಅರಳಿದ ಪುಷ್ಪಗಳು. ವಿವಿಧ ಹೂಗಳ, ಅಮಿತ ಪರಿಮಳದ ಪ್ರಸಾರಾಂಗ ವನ್ನು ಮೂಸಿ ಬರುತಿರುವ ಬಣ್ಣ ಬಣ್ಣದ ಚಿಟ್ಟೆಗಳ ದಂಡು ಮದುವೆಯ ದಿಬ್ಬಣಕೆ ಹೊರಟ ಸಿಂಗರಿಸಿದ ನಾರಿಯರ ದಂಡಿನಂತೆ ಸೊಗಸೆ ಸೊಗಸು. ಚಿಂವುಗುಡುವ, ಗುಬ್ಬಿ, ಪಿಕಳಾರ, ರತ್ನ ಪಕ್ಷಿ, ಬಣ್ಣ ಬಣ್ಣದ ಗಿಳಿಗಳ ಹಿಂಡು ಹಣ್ಣು ಕುಕ್ಕುತಿರಲು..... ಫಲಗಳ ಭಾರಕೆ, ದಿನ ತುಂಬಿದ ಬಸುರಿಯಂತೆ ಬಾಗಿ, ನೆಲವನ್ನು ತಾಗಲು ತಯಾರಾದ ಮರಗಳು. ಜೋಡಿಯಾಗಿ ಅಲೆಯುತಿರುವ



ನವಿಲುಗಳು. ಆ ಪರ್ಣಕುಟೀರದ ತುಸು ಮುಂದೆ, ಹೂ ತೋಟವನ್ನು ಹಾಯ್ದು ಬಂದರೆ ಸಣ್ಣ ಪುಷ್ಕರಣಿ. ಸುತ್ತಲೂ ನಾಲ್ಕು ಬದಿಯಿಂದ ಮಾಡಿದ ಚೌಕಾಕಾರದ, ಕಲ್ಲಿನ ಮೆಟ್ಟಿಲುಗಳು. ಶುಭ್ರ ಬಣ್ಣದ ಹಂಸಗಳು ಕೊಳದಲ್ಲಿ ಈಜುತಿವೆ, ಹೊನ್ನ ಮೀನುಗಳು ನೀರಿನ ಮೇಲ್ಮೈಗೂ ,ಆಳಕೂ ಓಲಾಡುತ ಜೋಕಾಲಿ ಆಡಿವೆ.

ಅಗೋ ಈ ಭೂರಮೆಯ ವೀರ ಪುರುಷ, ಅಮಿತ ಪರಾಕ್ರಮಿ, ಧನುರ್ಧಾರಿ, ದಯಾವಂತ, ಸದ್ಗುಣ ಸಂಪನ್ನ ಶೀಲ, ಶ್ರೀರಾಮ ಪ್ರಭು. ನೀರಿನಲ್ಲಿ ತನ್ನ ನೀಳವಾದ ಕಾಲುಗಳನ್ನು ನೀಡಿ ಕುಳಿತಿರುವ. ನೀರಿನಲ್ಲಿ ಅವನ ಪದತಲಕೆ ಹೊನ್ನ ಮೀನುಗಳು, ಬೆಳ್ಳಿ ಬಂಗುಡಿ,ಚುಕ್ಕೆಯ ಮತ್ಸಯಗಳು, ಚಿಕ್ಕ ಮೀನುಗಳು ನಾ, ನೀನು ಎನ್ನುತ್ತ ಮುತ್ತು ಕೊಡುತಿವೆ.

ಅವನಿಗೆ ತಾಗಿದಂತೆ ಕುಳಿತ ಸೀತೆ, ಸ್ನಿಗ್ಧ ಸೌಂದರ್ಯದ ರಾಶಿ, ಅಪಾರ ಕಾಂತಿ ಅವಳ ಮುಖ, ಸುಂದರತೆಯಲಿ ನೂರ್ಮಡಿಸುವ ಅವಳ ನಗು, ಬಿಳಿ ಸ್ಫಟಿಕದಂತೆ, ಕಲೆಯೇ ಇಲ್ಲದ ಅವಳ ಸಂಪೂರ್ಣ ಬಿಂಬ, ಅಲೌಕಿಕ ಬೆಳಗು ಸುರಿಯುತಿತ್ತು. ಅವರಕುಳಿತ ಭಂಗಿ ಗುಡ್ಡದ ಮೇಲೆ ಎರಡು ಶಿಲೆಗಳು ತಾಗಿ ಕುಳಿತಂತೆ, ದೀಪದಲ್ಲಿ ಮುತ್ತಿನಂತೆ ಉರಿಯುವ ಜ್ಯೋತಿಯಂತೆ,ಧ್ಯಾನಿಸುವ ಆತ್ಮಗಳಂತೆ ಕಂಗೊಳಿಸುತ್ತಿತ್ತು. ಅವರು ಕುಳಿತ ಬಿಂಬ ಪುಷ್ಕರಣಿ ನೀರಿನಲ್ಲಿ , ಚಿತ್ರಕಲೆಯಲ್ಲಿ ಕುಂಚದಿಂದ ಬಿಡಿಸಿದಷ್ಟೇ ಸ್ಫುಟವಾಗಿ, ದಿಟವಾಗಿ ಕಾಣುತಿತ್ತು. ಕನ್ನಡಿಯಂತೆ ಶುಭ್ರ ವಾದ, ಪಾರದರ್ಶಕವಾದ, ಗಾಜಿನಂತೆ ಸ್ಫುಟವಾದ ತಿಳಿ ನೀರು, ಎಳೆ ನೀರಿನ ಷ್ಟೇ ಸಿಹಿ. ಇಂತಹ ಧರೆಯಲ್ಲಿ ನಿರ್ಮಿತ ಸ್ವರ್ಗದಸಿರಿ ಯಲ್ಲಿ, ಪ್ರಕೃತಿಯ ಮಡಿಲಲ್ಲಿ ಪುರೋಷತ್ತಮನಾದ ಶ್ರೀ ರಾಮಚಂದ್ರ ಮತ್ತು ಜಗನ್ಮಾತೆಯಾದ ಸೀತಾ ದೇವಿ ಜೋಡಿದೀಪದಂತೆ ಕುಳಿತಿರಲು...

ಪುಟ್ಟ ಅಳಿಲು, ಪಟ್ಟು ಹಿಡಿದು, ಪಟಪಟನೆ ರಾಮನ ಬಳಿ ಬಂತು. ರಾಮ ತನ್ನ ಅಜಾನುಬಾಹು ಹೆಗಲನ್ನು ಸಡಿಲಿಸಿ, ತನ್ನ ಶಕ್ತಿಯುತ, ವಜ್ರ ಕಠಿಣ ತೋಳನ್ನು ಚಾಚಿ, ತನ್ನ ಅದೃಷ್ಟದ ಅಂಗೈಯನ್ನು, ಅಭಯದ ಹಸ್ತವನ್ನು ಚಾಚಿದೆನು.


ಅಳಿಲು, ಆತುರದಿ ಅವನ ಕೈ ಯಲ್ಲಿ, ಜಗದೊಡಯನ ಅಭಯ ಹಸ್ತದಲ್ಲಿ ಕುಳಿತಿತು.ಹೂವಿನನಷ್ಟೇ, ಮೃದುವಾಗಿ ಅಳಿಲನ್ನು ಕೋಮಲವಾಗಿ ಸ್ಪರ್ಷಿಸಿ,ಏನು ಎನ್ನುವ ಪ್ರಶ್ನಾರ್ಥಕ ನೋಟವನ್ನು, ದಯಾಪೂರ್ಣ ದೃಷ್ಟಿಯಲ್ಲಿ ಕೇಳಿದನು. ಆಗ ಅಳಿಲು" ಪ್ರಭು ಶ್ರೀ ರಾಮ, ನೀನು ಸಕಲಚರಾಚರಗಳನ್ನು ಸೃಷ್ಟಿಸಿ,ಶತಕೋಟಿ ಜೀವಗಳನ್ನು ಸೃಷ್ಟಿಸಿ, ಎಲ್ಲರಿಗೂ ಅವರದೇ ಆದ ವಿಶೇಷತೆ ಮತ್ತು ದುಃಖ ಗಳನ್ನು ಕೂಡ ಸೃಷ್ಟಿಸಿದೆ, ಪ್ರಭು. ಆದರೆ ಕೆಲವು ಮಾನವರಲ್ಲಿ ಮಾತ್ರ, ವಿಪರೀತ ಕ್ರೌರ್ಯ, ಜಂಭ, ದುರಾಸೆ ಎಲ್ಲವೂ ತನ್ನದಾಗಬೇಕೆಂಬ ಹಂಬಲ, ಮಾತಿನಲ್ಲಿ ವಿಷ,ಮನದಲ್ಲಿ ಕ್ರೋಧ,ದೃಷ್ಟಿಯಲ್ಲಿ ಹಂಬಲ. ಇಂತಹ ವಿಪರೀತ ವಿಷಕಾರಿ ಜನರೊಡನೆ, ಅಮಾಯಕ, ಪ್ರಾಮಾಣಿಕ.... ನೀತಿವಂತರ ಬದುಕು ಹೇಗೆ ಸಾಗಬೇಕು!? "

ಆಗಶ್ರೀರಾಮ... ನಸು ನಕ್ಕು...ಮೃದುತಲ ಹಸ್ತದಿಂದ,ಅಳಿಲಿನ ಶುದ್ಧ



ತುಪ್ಪಳ ಲಘುವಾಗಿ ನೇವರಿಸುತ್ತಾ, ಪ್ರಕೃತಿಯ ರಮ್ಯ ಲಹರಿಯತ್ತ ಒಂದು ನೋಟ ಚಲ್ಲಿ," ಅಳಿಲೇ, ವ್ಯಾಘ್ರ ಒಂದು ಬಾರಿಗೆ ಮೂರರಿಂದ, ನಾಲ್ಕುಮರಿ ಹಾಕುತ್ತದೆ, ಆದರೆ ಜಿಂಕೆ ಒಂದೇ ಮರಿ ಹಾಕುತ್ತದೆ. ಆದರೆ ಕಾಡಿನಲ್ಲಿ ಜಿಂಕೆಯ ಹಿಂಡು ಗಳಷ್ಟು ವ್ಯಾಘ್ರದ ದಂಡುಗಳಿವೆಯೇ!? ಬಿರುಗಾಳಿ ಇದೆ ಎಂದು ದೀಪ ಹಚ್ಚುವದನ್ನೇ ಬಿಟ್ಟರೆ.... ಬದುಕಿಗೆ ಕತ್ತಲೆಯೇ ಉತ್ತರವಲ್ಲ,ನೀರು ನಿಂತರೆ ಕೊಳೆಯುತ್ತ ಪಾಚಿ ತುಂಬುತ್ತದೆ,ನೀರು ಹರಿಯುತ್ತಿದ್ದರೆ ನಿಂತ ಕೊಳೆಯನ್ನು ಕೊಚ್ಚಿಕೊಂಡು,ತೊಳೆದು ಹಾಕುತ್ತದೆ.... ಇದೇ ಬದುಕು!! "

# ಐಕ್ಯತೆಯ ಭಾವ...



ಸ್ನೇಹಾ ಆನಂದ್

ಸ್ನೇಹ ಲೋಕ

ನಾನು ಒಂದು ವಿಚಾರವನ್ನು ಮತ್ತೆ ಮತ್ತೇ ಬರೆಯಲು ಹೋಗಿ ಹಿಂದಕ್ಕೆ ಸರಿತೀನಿ, ಯಾಕಂದ್ರೆ ಜಾತಿ, ಧರ್ಮದ ಬಗ್ಗೆ ಬರೆಯುವುದು ಅಷ್ಟು ಸರಿಯಲ್ಲ ಅಂತ ಅನಿಸುತ್ತೆ! ಆದರೆ ಯಾರಾದರೂ ನಮ್ಮ ಧರ್ಮವನ್ನು ತೆಗಳಿದರೆ ಮನಸ್ಸಿಗೆ ಕಿರಿಕಿರಿ ಆಗುತ್ತದೆ ಅಲ್ಲವೇ, ಆಗ ಲೇಖನಿ ಹಟ ಹಿಡಿಯುತ್ತದೆ!

ನಮ್ಮ ನಾಡು, ನಮ್ಮ ದೇಶ, ನಮ್ಮ ಭಾಷೆ ಹೀಗೆ ನಮಗೆ ಅಭಿಮಾನ ಇರುವಂತೆ ನಮ್ಮ ಜಾತಿ, ಧರ್ಮದ ಬಗ್ಗೆ ನಮಗೆ ಅಭಿಮಾನ ಇರುವುದು ಸಹಜ!

ನಾನು ಕನ್ನಡವನ್ನು, ಕರುನಾಡನ್ನು ಯಾವತ್ತೂ ಬಿಟ್ಟು ಕೊಡುವುದಿಲ್ಲ, ಅದರಂತೆ ನಮ್ಮ ಧರ್ಮವನ್ನೂ ಕೂಡ! ಹಾಗಂತ ಬೇರೆ ಜಾತಿಯ ಬಗ್ಗೆಯೂ ಗೌರವವಿದೆ ಹೀಗಾಗಿ ಅವರವರ ಸಂಪ್ರದಾಯಕ್ಕೆ ಬೆಲೆ ಕೊಡುತ್ತೇನೆ!

ನಮ್ಮ ಸಂಪ್ರದಾಯಕ್ಕೆ ಧಕ್ಕೆ ಬಾರದಂತೆ ಇರಲಿ ಎಂದು ಆಶಿಸುತ್ತೇನೆ!

ನಾವು ಬ್ರಾಹ್ಮಣರು ರಾಮನನ್ನು ಪೂಜಿಸುತ್ತೇವೆ, ಬ್ರಾಹ್ಮಣನೆಂದ ಮಾತ್ರಕ್ಕೆ ರಾವಣನನ್ನು ಪೂಜಿಸುತ್ತೇವೆಯೇ, ಆತನ ದೇವಸ್ಥಾನ ಕಟ್ಟಿದ್ದೆವೆಯೇ,

ಆತ ಮಹಾ ಬ್ರಾಹ್ಮಣ ಎನಿಸಿಕೊಂಡರೂ ಆತನ ಹೆಸರನ್ನೂ ಮಕ್ಕಳಿಗೆ ಇಡುವುದಿಲ್ಲ, ರಾವಣನ ನೀಚ ಗುಣವನ್ನು ಬ್ರಾಹ್ಮಣರು ದ್ವೇಷಿಸುತ್ತಾರೆ, ಅಂದ ಮೇಲೆ ಬ್ರಾಹ್ಮಣರಲ್ಲಿ ಕೆಟ್ಟ ವ್ಯಕ್ತಿಗಳು ರಾಜಕೀಯದಲ್ಲಿದ್ದರೆ ನಾವು ಅವರಿಗೆ ಓಟು ಹಾಕುತ್ತೇವೆಯೇ, ಖಂಡಿತಾ ಸಾಧ್ಯವಿಲ್ಲ! ಒಳ್ಳೆಯ ನಡತೆಗೆ ಬೆಲೆ ಕೊಡುತ್ತೇವೆ ರಾಮನಂತಹ ಗುಣದವರಿಗೆ ನ್ಯಾಯವಂತರಿಗೆ!

ನೀವು ಗಮನಿಸಿರಬಹುದು ಬ್ರಾಹ್ಮಣರಲ್ಲಿ ನೀಚ ಗುಣದವರು ವಿರಳವಾಗಿ ಸಿಗುತ್ತಾರೆ, ತಮ್ಮ ಪಾಡಿಗೆ ತಾವಿರುವ ಗುಣ ಬಹಳಷ್ಟು ಬ್ರಾಹ್ಮಣರ ಸ್ವಭಾವದಲ್ಲಿದೆ! ಹೀಗಿದ್ದಾಗ ಪದೆ ಪದೇ ಮೇಲ್ಜಾತಿಯರೆನಿಸಿಕೊಂಡವರ ಮೇಲೆ ಹೀಯಾಳಿಸಿ, ಬೇಧ ಭಾವದ ಆಪಾದನೆ ಕಟ್ಟಿ ಮಾತನಾಡುವುದು ಮನಸ್ಸಿಗೆ ನೋವು ಕೊಡುತ್ತದೆ! ಮಾಡಲು ಏನೂ ಕೆಲಸವಿಲ್ಲವೆಂದರೆ ಜಾತಿ, ಧರ್ಮದ ಮೇಲೆ ದಾಳಿ ಮಾಡುತ್ತಾರೆ ಕೆಲವರು !

ಧಾರ್ಮಿಕ ಕಾರ್ಯಕ್ರಮಗಳು ಅವರವರ ಧರ್ಮಕ್ಕೆ ಒಳಪಟ್ಟದ್ದು ಅದ ತೀರಾ ವೈಯಕ್ತಿಕ ವಿಷಯ !

ನಮ್ಮ,ಮನೆತನದ, ಮನಸಿನ ಆರಾಧ್ಯ ದೈವ ನಮ್ಮ ಪೂಜೆ , ಪುನಸ್ಕಾರ ಎಲ್ಲವೂ ಅವರದೇ ಆದ ಒಂದು ಸಂಪ್ರದಾಯದ ಚೌಕಟ್ಟಿನಲ್ಲಿ ನಡೆಯುತ್ತದೆ!ಅದು ಅವರ ಶ್ರದ್ಧೆ, ಭಕ್ತಿಗೆ ಸಂಬಂಧ ಪಟ್ಟದ್ದು ಅಷ್ಟೇ!

ಹೀಗಾಗಿ ಆ ಚೌಕಟ್ಟನ್ನು ದಾಟಿ ಯಾರೂ ಹೀಯಾಳಿಸಿ ಮಾತನಾಡಬಾರದು, ಪೌರೋಹಿತ್ಯ ಮಾಡುವವರನ್ನು ಕುಚೇಷ್ಟೆಗೆ ಒಳಪಡಿಸಬಾರದು!



ಅದು ಅವರ ಧಾರ್ಮಿಕ ಕಾಯಕ, ಅವರ ಸಂಸಾರದ ಹೊಣೆಗಾರಿಕೆ ಅವರಿಗೆ ಇದ್ದೇ ಇರುತ್ತದೆ ಅಲ್ವಾ ಅವರ ಜೀವನಕ್ಕೂ ಹಣದ ಅವಶ್ಯಕತೆ ಇರುತ್ತದೆ ಅಲ್ವಾ!ನೀವು ಕಂಪನಿಯಲ್ಲಿ ದುಡಿದಂತೆ ಅವರು ದೇವಸ್ಥಾನದಲ್ಲಿ ದುಡಿಯುತ್ತಾರೆ,

**ಅಂದ ಮೇಲೆ ಅವರ ಬಗ್ಗೆ ಇಲ್ಲ ಸಲ್ಲದ ಮಾತು ಏಕೆ !?**

ಬ್ರಾಹ್ಮಣರು ಹೋಮ ಹವನ, ವರಮಹಾಲಕ್ಷ್ಮಿ ಹಬ್ಬದ ದಿನ ಪೂಜೆ ಕೈಗೊಂಡಾಗ ಆ ತಾಯಿಗೆ ಮೊದಲು ವರ ಕೇಳುವುದು ತಮಗಾಗಿ ಬಂಗಾರ, ಬೆಳ್ಳಿಯಲ್ಲ!

ದೇಶದಲ್ಲಿ ಮಳೆ, ಬೆಳೆ ಸರಿಯಾಗಿ ಆಗಲಿ ದೇಶ ಸಮೃದ್ಧಿಯಿಂದ ಇರಲಿ ಅಂತ ಬೇಡಿಕೊಳ್ಳುತ್ತೇವೆ! ನಂತರ ವೈಯಕ್ತಿಕ ಆಸೆಗಳ ಬೇಡಿಕೆಯನ್ನು ಇಡುತ್ತೇವೆ !

ಅಂದಾಗ ನಾವು ಇನ್ನೊಂದು ಧರ್ಮದವನ್ನು ಹೇಗೆ ದ್ವೇಷಿಸುತ್ತೇವೆ ನೀವೇ ಹೇಳಿ, ನಮ್ಮ ಧರ್ಮ ನಮಗೆ ದೊಡ್ಡದು ಎನ್ನುವುದು ತಪ್ಪಲ್ಲ ಅಲ್ವಾ!

ಹೇಗೆ ಕ್ರೈಸ್ತರು, ಮುಸ್ಲಿಂ ಬಾಂಧವರು ತಮ್ಮ ಧರ್ಮವನ್ನು ಪಾಲಿಸುತ್ತಾರೋ ಹಾಗೆ . ಹಿಂದೂಗಳಲ್ಲಿ ಆಯಾಯ ಧರ್ಮದವರದೂ ಅವರದೇ ಆದ ಧಾರ್ಮಿಕ ಪಾಲನೆ, ಸಂಪ್ರದಾಯ ಇದೆ ! ಇದನ್ನು ಪ್ರತಿಯೊಬ್ಬರೂ ಮೊದಲು ಮನಸ್ಪೂರ್ತಿಯಿಂದ ಒಪ್ಪಿಕೊಳ್ಳಬೇಕು!

ಆದರೆ ಇದನ್ನು ತಿಳಿದು ಕೊಳ್ಳುವವರು ಕಡಿಮೆ, ದ್ವೇಷ ಮಾಡುವುದು ಮಾತ್ರ ನಮಗೆ ಗೊತ್ತು ಅಷ್ಟೇ ಎನ್ನುವ ಹಾಗೆ ದ್ವೇಷಿಸುತ್ತಾರೆ!

ಯಾವುದೇ ಪಕ್ಷ ಆಡಳಿತಕ್ಕೆ ಬಂದರೂ ಸರ್ಕಾರದ ಪ್ರತಿಯೊಂದು ಯೋಜನೆಯಲ್ಲಿ ಮೇಲ್ಜಾತಿ ಅನ್ನಿಸಿಕೊಂಡವರಿಗೆ ಯಾವುದೇ ಉಪಯೋಗವಿಲ್ಲ, ನಮ್ಮ ದೇಶ ಭದ್ರತೆಯಿಂದ ಕೂಡಿರಲಿ, ಅಭಿವೃದ್ಧಿಗೊಳ್ಳಲಿ

ಎಂದು ಆಶಿಸಿ ಓಟು ಹಾಕುವುದು ಅಷ್ಟೇ ಹೊರತು, ಬೇರೆ ಯಾವ ಲಾಭವೂ ಇಲ್ಲ, ಮೇಲ್ಜಾತಿಯ ಮಧ್ಯಮ ವರ್ಗದವರು ಇದರಲ್ಲಿ ಸಿಲುಕಿ ಹೋಗಿದ್ದಾರೆ, ಅವರಿಗೆ ಆಸ್ತಿ ಪಾಸ್ತಿ ಜಾಸ್ತಿ ಇರುವುದಿಲ್ಲ, ಬಂದ ಆದಾಯದಲ್ಲಿ ವಿಧೇಯತೆಯಿಂದ ತೆರಿಗೆ ಕಟ್ಟಿ ಜೀವನ ಬಂಡಿ ಓಡಿಸುವುದೇ ದುಸ್ತರ ಈಗೀನ ಕಾಲದಲ್ಲಿ!

ಎರಡು ಮಕ್ಕಳನ್ನು ಓದಿಸಿ ಬರೆಯಿಸಿ ಮದುವೆ ಮಾಡುವುದರಲ್ಲಿ ಇರುವ ಸ್ವಲ್ಪ ತಮ್ಮ ಆಸ್ತಿ ಪಾಸ್ತಿಗಳನ್ನು ಒತ್ತೆ ಇಟ್ಟಿರುತ್ತಾರೆ!

ಆದರೆ ಇಲ್ಲಿಯವರಿಗೂ ಮೇಲ್ಜಾತಿ ಅನ್ನಿಸಿಕೊಂಡವರು "ಮೀಸಲಾತಿಯ" ಬಗ್ಗೆ ಧರಣಿ ಮಾಡಿಲ್ಲ, ಮಕ್ಕಳು ಅತಿ ಜಾಸ್ತಿ ಅಂಕ ತೆಗೆದು ಪಾಸಾದರೂ ಅವರಿಗೆ ಅಲ್ಲಿ ಸೀಟ್ ಇಲ್ಲ ಅಂದರೆ ಮನಸ್ಸು ಅತ್ತರೂ ಮೌನವಾಗಿ ಹೊರನಡೆದು ಬಿಡುತ್ತಾರೆ, ಯಾರನ್ನೂ ದೂಷಿಸದೆ, ತಮಗೆ ತಾವೇ ಸಮಾಧಾನ ಪಟ್ಟು ಸಿಕ್ಕ ಕಾಲೇಜು ಸೇರಿ ವಿದ್ಯಾಭ್ಯಾಸದಲ್ಲಿ ಮುಂದುವರೆಯುತ್ತಾರೆ!

ಇಷ್ಟಾದರೂ ಸಹ ಇನ್ನೂ ಮೇಲ್ಜಾತಿಯನ್ನು ಹೀಗೆಳೆಯುವುದು ಬಿಟ್ಟಿಲ್ಲ, ಒಂದು ಸಲ ನೀವೂ ಯೋಚಿಸಿ ನಿಮ್ಮ ಮಕ್ಕಳ ಭವಿಷ್ಯದಂತೆ ಅವರ ಮಕ್ಕಳ ಭವಿಷ್ಯವೂ ಚೆನ್ನಾಗಿರಬೇಕಲ್ಲವೇ!

ಹೇಗೆ ಭಾರತದಲ್ಲಿ ರಾಜ್ಯಗಳು ಬೇರೆ, ಬೇರೆ ಹಾಗೆ ಜಾತಿಗಳು ಬೇರೆ ಬೇರೆ ಅಷ್ಟೇ!

ಎಲ್ಲಾ ರಾಜ್ಯಗಳು ಕೂಡಿ ಭಾರತವಾಗುವಂತೆ, ಎಲ್ಲಾ ಜಾತಿ, ಧರ್ಮಗಳು ಸೇರಿ ಹಿಂದುತ್ವವನ್ನು ಸಾರುತ್ತವೆ !

ಈ ರೀತಿಯಲ್ಲಿ ಯೋಚಿಸಿದರೆ ಅರ್ಜಿ ತುಂಬುವಾಗ ನಮ್ಮ ಹೆಸರು, ವಯಸ್ಸು, ತಂದೆ ತಾಯಿ ಹೆಸರು,ವಿದ್ಯಾರ್ಹತೆ, ಮಾತೃಭಾಷೆ, ನಾವು ಭಾರತೀಯರು ಇಷ್ಟು ಸಾಕಲ್ಲವೇ?

ಆಗ ಜಾತಿ,ಮತಗಳ ಕೀಳರಿಮೆ, ಭಿನ್ನಾಭಿಪ್ರಾಯ ಬರುವುದೇ ಇಲ್ಲ! ಅವರ ಅಂಕಗಳ ಅರ್ಹತೆಗನುಗುಣವಾಗಿ ಕಾಲೇಜು,ಕೆಲಸ ಸಿಗುತ್ತದೆ!


ಮುಖ್ಯವಾಗಿ ಸಮಾಜದಲ್ಲಿ ಈ ಐಕ್ಯತೆ ಸಾರುವುದಕ್ಕೆ ಸರಕಾರದ ಕಡೆಯಿಂದಲೇ ಮೊದಲು ಸಹಕಾರ, ಪ್ರೋತ್ಸಾಹ ಬೇಕು, ಎಷ್ಟೋ ವರ್ಷಗಳಗಳಿಂದ ಮೇಲ್ಜಾತಿ , ಕೆಳಜಾತಿ ಎಂದು ಅರ್ಜಿಯಲ್ಲಿ ಬರೆಯಿಸಿಕೊಳ್ಳುವವರು ಅವರೇ, ಜೊತೆಗೆ ಜಾತಿಯ ಬಗ್ಗೆ ಮಾತನಾಡಿಬೇಡಿ ಎನ್ನುವವರು ಕೂಡ ಅವರೇ! ಜಾತಿ ಭೇದ ಬೇಡ ಅಂದ ಮೇಲೆ ಮೇಲ್ಜಾತಿ, ಕೆಳಜಾತಿಯ ಕಾಲಂ ಏಕೆ ಬೇಕು! ಎಲ್ಲರನೂ ಒಂದೇ ರೀತಿಯಲ್ಲಿ ನೋಡಿದರೆ ಸಾಕಲ್ಲವೇ!

ಮೊಟ್ಟ ಮೊದಲು ಜಾತಿ ಧರ್ಮದ ಹೆಸರುಗಳನ್ನು ಅರ್ಜಿಯಿಂದ ಕಿತ್ತೆಸೆದರೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ಖಂಡಿತಾ ಬರುತ್ತದೆ!

ಆ ನಿಟ್ಟಿನಲ್ಲಿ ಯೋಚಿಸಿ ಸರ್ಕಾರ ಕಾಯಿದೆ, ಕಾನೂನುಗಳನ್ನು ಮತ್ತೇ ತಿದ್ದುಪಡಿ ಮಾಡಿ ಜಾರಿಗೆ ತಂದರೆ ಈ ಜಾತಿ ದ್ವೇಷ ಹೇಳ ಹೆಸರಿಲ್ಲದಂತೆ ನಿರ್ನಾಮವಾಗುತ್ತದೆ!

ಆದರೆ ಇದನ್ನು ತಿಳಿದುಕೊಳ್ಳುವ ಕಾಲ ಇನ್ನೂ ಬಂದಿಲ್ಲ, ಮುಂದೊಂದು ದಿನ ಇದು ಮನವರಿಕೆಯಾಗಲಿ, ಎಲ್ಲರಿಗೂ ಒಂದೇ ನ್ಯಾಯ ಸಿಗಲಿ ಅಂತ ಭಗವಂತನಲ್ಲಿ ಕೇಳಿಕೊಳ್ಳೋಣ!

# ಈ ಸಮಯ ಕಳೆದು ಹೋಗುತ್ತದೆ?



ಸಮಯವೆಂಬುದು ನಿಲ್ಲದ ನದಿ. ಅದು ಯಾವಾಗಲೂ ಹರಿಯುತ್ತಲೇ ಇರುತ್ತದೆ. ನಾವು ಸಂತೋಷದಲ್ಲಿರಲಿ, ದುಃಖದಲ್ಲಿರಲಿ, ಯಶಸ್ಸಿನ ಶಿಖರದಲ್ಲಿರಲಿ ಅಥವಾ ಸೋಲಿನ ತಳದಲ್ಲಿರಲಿ ? ಸಮಯ ತನ್ನ ದಾರಿಯಲ್ಲಿ ಸಾಗುತ್ತಲೇ ಇರುತ್ತದೆ. ಈ ಒಂದು ವಾಕ್ಯ ಜೀವನದ ಬದಲಾವಣೆ, ಸಹನೆ, ಮತ್ತು ನಿರಂತರ ಪ್ರಯತ್ನದ ಮಹತ್ವವನ್ನು ನಮಗೆ ಬೋಧಿಸುತ್ತದೆ.



ನಮ್ಮ ಜೀವನದಲ್ಲಿ ಅನೇಕ ಕ್ಷಣಗಳು ಬರುತ್ತವೆ. ಕೆಲವೊಮ್ಮೆ ನಾವು ಅಪಾರ ಸಂತೋಷವನ್ನು ಅನುಭವಿಸುತ್ತೇವೆ. ಆ ಸಮಯದಲ್ಲಿ ನಮಗೆ ಅದು ಎಂದಿಗೂ ಮುಗಿಯಬಾರದೆಂದು ಅನಿಸುತ್ತದೆ. ಆದರೆ ನಿಜವೆಂದರೆ, ಆ ಸಂತೋಷದ ಕ್ಷಣವೂ ಕಳೆದು ಹೋಗುತ್ತದೆ. ಇದೇ ರೀತಿ, ದುಃಖದ ಸಮಯದಲ್ಲಿ ನಾವು ನಿರಾಶೆಯಾಗುತ್ತೇವೆ, ನಮ್ಮ ಜೀವನವೇ ಕತ್ತಲೆಯಾಗಿದೆ ಎಂದು ಭಾವಿಸುತ್ತೇವೆ. ಆದರೆ ಈ ಮಾತು ನಮಗೆ ಧೈರ್ಯ ನೀಡುತ್ತದೆ ? ?ಈ ಸಮಯವೂ ಕಳೆದು ಹೋಗುತ್ತದೆ?.

ಸಮಯದ ಮಹತ್ವವನ್ನು ಅರಿತವರು ಜೀವನದಲ್ಲಿ ಯಶಸ್ಸು ಸಾಧಿಸುತ್ತಾರೆ. ಅವರು ಪ್ರತಿಯೊಂದು ಕ್ಷಣವನ್ನೂ ಉಪಯೋಗಿಸಿಕೊಳ್ಳುತ್ತಾರೆ. ಏಕೆಂದರೆ



ಒಮ್ಮೆ ಕಳೆದುಹೋದ ಸಮಯವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಹಣವನ್ನು, ಆಸ್ತಿ ಸಂಪತ್ತನ್ನು ಮತ್ತೆ ಗಳಿಸಬಹುದು, ಆದರೆ ಸಮಯವನ್ನು ಹಿಂದಿರುಗಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಸಮಯವನ್ನು ಗೌರವಿಸಬೇಕು.

ಇದೇ ವೇಳೆ, ಈ ಮಾತು ನಮಗೆ ಅಹಂಕಾರವನ್ನು ಬಿಡುವಂತೆ ಮಾಡುತ್ತದೆ. ನಾವು ಯಶಸ್ಸಿನ ಶಿಖರದಲ್ಲಿ ಇದ್ದಾಗ, ?ಈ ಸಮಯ ಕಳೆದು ಹೋಗುತ್ತದೆ? ಎಂದು ನೆನಪಿಸಿಕೊಂಡರೆ, ನಾವು ವಿನಯವನ್ನು ಕಾಪಾಡಿಕೊಳ್ಳಬಹುದು. ಏಕೆಂದರೆ ಯಾವುದೇ ಸ್ಥಾನ ಶಾಶ್ವತವಲ್ಲ. ಇಂದು ಇದ್ದ ಸ್ಥಾನ ನಾಳೆ ಇರದಿರಬಹುದು. ಆದ್ದರಿಂದ ನಾವು ಸದಾ ಸರಳತೆ ಮತ್ತು ವಿನಯದಿಂದ ಬದುಕಬೇಕು.

ಸಮಸ್ಯೆಗಳು ನಮ್ಮ ಜೀವನದ ಅವಿಭಾಜ್ಯ ಅಂಗ. ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಹಲವು ಸವಾಲುಗಳನ್ನು ಎದುರಿಸುತ್ತಾರೆ. ಕೆಲವೊಮ್ಮೆ ಆ ಸಮಸ್ಯೆಗಳು ನಮ್ಮನ್ನು ಕುಗ್ಗಿಸುತ್ತವೆ. ಆದರೆ ಈ ಮಾತು ನಮಗೆ ಪ್ರೇರಣೆ ನೀಡುತ್ತದೆ ? ?ಈ ಕಷ್ಟವೂ ಶಾಶ್ವತವಲ್ಲ?. ಇದರಿಂದ ನಾವು ಧೈರ್ಯವಾಗಿ ಮುಂದೆ ಸಾಗಲು ಸಾಧ್ಯವಾಗುತ್ತದೆ. ಕಷ್ಟಗಳನ್ನು ತಾತ್ಕಾಲಿಕವಾಗಿ ನೋಡಿ, ನಾವು ನಮ್ಮ ಗುರಿಯ ಕಡೆಗೆ ಪ್ರಯತ್ನಿಸಬೇಕು.

ಸಮಯ ನಮ್ಮ ಗುರು ಕೂಡ ಆಗಿದೆ. ಅದು ನಮಗೆ ಪಾಠಗಳನ್ನು ಕಲಿಸುತ್ತದೆ. ಸಂತೋಷದ ಸಮಯದಲ್ಲಿ ನಾವು ಕೃತಜ್ಞತೆಯನ್ನು ಕಲಿಯುತ್ತೇವೆ. ದುಃಖದ ಸಮಯದಲ್ಲಿ ಸಹನೆ ಮತ್ತು ಧೈರ್ಯವನ್ನು ಕಲಿಯುತ್ತೇವೆ. ಪ್ರತಿಯೊಂದು ಕ್ಷಣವೂ ನಮ್ಮ ಜೀವನವನ್ನು ರೂಪಿಸುತ್ತದೆ. ಆದ್ದರಿಂದ ನಾವು ಪ್ರತಿಯೊಂದು ಅನುಭವದಿಂದ ಏನಾದರೂ ಕಲಿಯಬೇಕು.

ಇಂದಿನ ಯುವಕರಾದ ನಾವು ಸಮಯವನ್ನು ವ್ಯರ್ಥ ಮಾಡುವ ಪ್ರವೃತ್ತಿಯನ್ನು ಹೊಂದಿದ್ದೇವೆ. ಸಾಮಾಜಿಕ ಜಾಲತಾಣಗಳು, ಅನಗತ್ಯ ವ್ಯಸನಗಳು ಮುಂತಾದ ಬೇಡದ ಕಾರ್ಯಗಳು ನಮ್ಮ ಅಮೂಲ್ಯ ಸಮಯವನ್ನು ಕಳೆಯುತ್ತಿದ್ದೇವೆ. ಆದರೆ ನಾವೆಲ್ಲ ಈ ಸತ್ಯವನ್ನು ಅರಿಯಬೇಕು ? ?ಈ ಸಮಯ ಕಳೆದು ಹೋಗುತ್ತದೆ?.

ಈ ವಯಸ್ಸಿನಲ್ಲಿ ಕಳೆದುಹೋದ ಸಮಯವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ನಾವೆಲ್ಲ ನಮ್ಮ ಗುರಿ ಸಾಧನೆಗೆ ಸಮಯವನ್ನು ಸರಿಯಾಗಿ ಬಳಸಬೇಕು.

ಸಮಯದ ಬೆಲೆ ಅರಿತವರು ಜೀವನದಲ್ಲಿ ಯಶಸ್ವಿಯಾಗುತ್ತಾರೆ. ಅವರು ತಮ್ಮ ದಿನಚರಿಯನ್ನು ಸರಿಯಾಗಿ ಯೋಜಿಸುತ್ತಾರೆ. ಅವರು ಸಮಯಕ್ಕೆ ಮಹತ್ವ ನೀಡಿ, ಪ್ರತಿಯೊಂದು ಕ್ಷಣವನ್ನೂ ಫಲಪ್ರದವಾಗಿಸುತ್ತಾರೆ. ಇಂತಹವರು ಮಾತ್ರ ತಮ್ಮ ಕನಸುಗಳನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತದೆ.

ಕುಟುಂಬ ಮತ್ತು ಸ್ನೇಹಿತರೊಂದಿಗೆ ಕಳೆಯುವ ಸಮಯವೂ ಬಹುಮುಖ್ಯ. ನಾವು ಪ್ರೀತಿಸುವ ಜನರೊಂದಿಗೆ ಕಳೆದ ಕ್ಷಣಗಳು ಮತ್ತೆ ಮರಳಿ ಬರುವುದಿಲ್ಲ. ಆದ್ದರಿಂದ ನಾವು ಅವರೊಂದಿಗೆ ಸಮಯ ಕಳೆಯಬೇಕು. ಏಕೆಂದರೆ ಜೀವನದ ಕೊನೆಯಲ್ಲಿ ನಾವು ಸಂಗ್ರಹಿಸಿದ ಸಂಪತ್ತಿಗಿಂತ, ನಮ್ಮ ಸಂಬಂಧಗಳೇ ಮುಖ್ಯವಾಗುತ್ತವೆ.

ಈ ಸಮಯ ಕಳೆದು ಹೋಗುತ್ತದೆ? ಎಂಬುದು ಕೇವಲ ಒಂದು ವಾಕ್ಯವಲ್ಲ, ಅದು ಜೀವನದ ದಾರಿದೀಪ. ಅದು ನಮಗೆ ಸಮತೋಲನವನ್ನು ಕಲಿಸುತ್ತದೆ. ಸಂತೋಷದಲ್ಲೂ ಅತಿಯಾಗಿ ತೇಲಬಾರದು, ದುಃಖದಲ್ಲೂ ಮುಳುಗಬಾರದು. ಎಲ್ಲವೂ ತಾತ್ಕಾಲಿಕವೆಂದು ಅರಿತು, ನಾವು ಶಾಂತ ಮನಸ್ಸಿನಿಂದ ಬದುಕಬೇಕು.

ಕೊನೆಯಲ್ಲಿ, ಸಮಯವೇ ಜೀವನ. ಅದನ್ನು ಗೌರವಿಸಿ, ಅದನ್ನು ಸರಿಯಾಗಿ ಬಳಸಿಕೊಂಡರೆ ಜೀವನ ಸಾರ್ಥಕವಾಗುತ್ತದೆ. ಪ್ರತಿಯೊಂದು ಕ್ಷಣವೂ ಅಮೂಲ್ಯ. ಅದನ್ನು ವ್ಯರ್ಥ ಮಾಡದೆ, ನಾವು ನಮ್ಮ ಗುರಿಗಳನ್ನು ಸಾಧಿಸಲು ಪ್ರಯತ್ನಿಸಬೇಕು. ಏಕೆಂದರೆ ?ಈ ಸಮಯ ಕಳೆದು ಹೋಗುತ್ತದೆ?



ಪ್ರಶಾಂತ್ ಎಂ. ಕಂಬಳಿ
ಎಸ್.ಸಿ.ಎಸ್.ಜಿ ಮಹಾವಿದ್ಯಾಲಯ ಲಕ್ಷ್ಮೇಶ್ವರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,